ST ALOYSIUS
ESTD : 1880
(DEEMED TO BE UNIVERSITY)
MANGALURU, KARNATAKA 575003 - INDIA

# NEWS CLIPPINGS

## 16-01-2026 TO 31-01-2026

*Udayavani 16-01-2026*

# ಎಪಿಡಿ ಪ್ರತಿಷ್ಠಾನ – ಪ್ಲಾಸ್ಟಿಕ್ ಫಿಶರ್: ಉಳ್ಳಾಲದಲ್ಲಿ ಬೀಚ್ ಸ್ವಚ್ಛತೆ ಅಭಿಯಾನ



**ಮಹಾನಗರ, ಜ. 15:** ಪರಿಸರ ಸಂರಕ್ಷಣೆ ಸಂಸ್ಥೆ ಪ್ಲಾಸ್ಟಿಕ್ ಫಿಶರ್ ಸಹಯೋಗದೊಂದಿಗೆ ನಗರದ ಆ್ಯಂಟಿ ಪೊಲ್ಯೂಷನ್ ಡ್ರೈವ್ ಫೌಂಡೇಶನ್ (ಎಪಿಡಿ ಪ್ರತಿಷ್ಠಾನ), ಪರಿಸರ ಜವಾಬ್ದಾರಿ ಮತ್ತು ಸಮುದಾಯದ ತೊಡಗಿಸಿಕೊಳ್ಳುವಿಕೆಗೆ ತನ್ನ ನಿರಂತರ ಬದ್ಧತೆಯ ಭಾಗವಾಗಿ ಉಳ್ಳಾಲದಲ್ಲಿ ಬೀಚ್ ಸ್ವಚ್ಛತೆ ಅಭಿಯಾನ ಆಯೋಜಿಸಿತು.

ಸಂತ ಅಲೋಶಿಯಸ್ ಕಾಲೇಜು, ರೋಶನಿ ನಿಲಯ, ಸಂತ ಆ್ಯಗ್ನೆಸ್ ಕಾಲೇಜಿನ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ಕೇಂದ್ರದ 50ಕ್ಕೂ ಹೆಚ್ಚು ವಿದ್ಯಾರ್ಥಿ ಸ್ವಯಂ ಸೇವಕರು ಪಾಲ್ಗೊಂಡರು. ಸಂಯೋಜಿತ ತಂಡಗಳಾಗಿ ಕಾರ್ಯನಿರ್ವಹಿಸಿದ ಸ್ವಯಂ ಸೇವಕರು ಬೀಚ್, ಸುತ್ತಮುತ್ತ ಸ್ವಚ್ಛಗೊಳಿಸಿ, ಪ್ಲಾಸ್ಟಿಕ್ ತ್ಯಾಜ್ಯ, ಮುರಿದ ಗಾಜು, ಚಪ್ಪಲಿಗಳು, ಇತರ ವಸ್ತುಗಳನ್ನು ಒಳಗೊಂಡಂತೆ ಸುಮಾರು 20 ಚೀಲ ತ್ಯಾಜ್ಯ ಸಂಗ್ರಹಿಸಿದರು.

ಅಭಿಯಾನದಲ್ಲಿ ಸಂಗ್ರಹಿಸಲಾದ ಸಂಪೂರ್ಣ ತ್ಯಾಜ್ಯವನ್ನು ಪ್ಲಾಸ್ಟಿಕ್ ಫಿಶರ್ ಸಂಸ್ಥೆ ಸ್ವೀಕರಿಸಿತು. ಸಂಗ್ರಹಿತ ವಸ್ತುಗಳನ್ನು ವೈಜ್ಞಾನಿಕವಾಗಿ ವರ್ಗೀಕರಿಸಿ, ಸಾಧ್ಯವಾದಲ್ಲಿ ವಿಲೇವಾರಿ, ಮರುಬಳಕೆ ಪ್ರಕ್ರಿಯೆ ಕೈಗೊಳ್ಳಲಿದೆ.

ಪ್ಲಾಸ್ಟಿಕ್ ಫಿಶರ್‌ನ ಸಿಇಒ ಕಾರ್ಸ್ಟನ್ ಹಿರ್ಷ್, ಮಾರ್ಕೆಟಿಂಗ್ ಮ್ಯಾನೇಜರ್ ಕ್ರಿಸ್ ಲೊಂಬಾರ್ಡಿ, ಒಪಿಎಕ್ಸ್ ಮ್ಯಾನೇಜರ್ ಅರ್ಜುನ್ ನಾಯಕ್, ಸಾಮಾಜಿಕ ಕಾರ್ಯಕರ್ತರಾದ ಕಿಶೋರ್ ಅತ್ತಾವರ ಮತ್ತು ಸೂರ್ಯನಾರಾಯಣ, ಉಳ್ಳಾಲ ನಾಗರಿಕ ವೇದಿಕೆಯ ನವೀನ್ ನಾಯಕ್, ಇಮ್ತಿಯಾಜ್ ಅಹಮದ್, ಕರ್ನಾಟಕ ರಕ್ಷಣಾ ವೇದಿಕೆಯ ಫಿರೋಝ್, ಎಪಿಡಿ ಪ್ರತಿಷ್ಠಾನದ ಸಂಯೋಜಕಿ ಗೀತಾ ಸೂರ್ಯ ಮೊದಲಾದವರು ಅಭಿಯಾನದ ನೇತೃತ್ವ ವಹಿಸಿದ್ದರು.

*Vijayakarnataka 17-01-2026*

# ಅನುವಾದವೇ ಸಾಹಿತಿಯನ್ನು ಶಾಶ್ವತಗೊಳಿಸುವ ಸೇತು: ವಿವೇಕ ರೈ

## ಅಮೃತ ಸೋಮೇಶ್ವರ ಅವರ ಕೃತಿಗಳ ಇಂಗ್ಲಿಷ್ ಅನುವಾದ ಪುಸ್ತಕ ಬಿಡುಗಡೆ



ಅಮೃತ ಸೋಮೇಶ್ವರರ ಗೊಂದೋಳು, ಸತ್ಯನಾಪುರ ಸಿರಿ, ರಾಯರಾವುತೆಯ ಇಂಗ್ಲಿಷ್ ಅನುವಾದ ಕೃತಿ ಬಿಡುಗಡೆಗೊಳಿಸಲಾಯಿತು.

■ **ವಿಕ ಸುದ್ದಿಲೋಕ** ಮಂಗಳೂರು

ಕೃತಿಗಳನ್ನು ಓದುವುದು ಹಾಗೂ ಅವುಗಳನ್ನು ಬೇರೆ ಭಾಷೆಗಳಿಗೆ ಅನುವಾದಿಸುವುದರಿಂದ ಆ ಕೃತಿಕಾರರು ನಮ್ಮ ಜತೆ ಶಾಶ್ವತವಾಗಿ ಬದುಕುತ್ತಾರೆ. ಅಮೃತ ಸೋಮೇಶ್ವರರಂತಹ ಮಹಾನ್ ಸಾಹಿತಿ ಹಾಗೂ ಸಾಂಸ್ಕೃತಿಕ ಚೇತನಗಳ ಬರಹಗಳನ್ನು ಓದಿ, ಅನುವಾದ ಮಾಡುವುದರಿಂದ ಅವರು ಸದಾ ನಮ್ಮೊಂದಿಗೆ ಇರುತ್ತಾರೆ. ಕೃತಿಗಳ ಓದಿನೊಂದಿಗೆ ತರ್ಜುಮೆಯ ಅಗತ್ಯವಿದೆ ಎಂದು ವಿಶ್ರಾಂತ ಕುಲಪತಿ, ಹಿರಿಯ ವಿದ್ವಾಂಸ ಪ್ರೊ. ಬಿ.ಎ. ವಿವೇಕ ರೈ ಹೇಳಿದರು.

ಕರ್ನಾಟಕ ತುಳು ಅಕಾಡೆಮಿ, ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಭಾಷೆ ಮತ್ತು ಸಂಸ್ಕೃತಿ ಅಧ್ಯಯನ ನಿಕೇತನ-ಆಂಗ್ಲಭಾಷಾ ವಿಭಾಗದ ವತಿಯಿಂದ ಬುಧವಾರ ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸಾನಿಧ್ಯ ಸಭಾಂಗಣದಲ್ಲಿ ನಡೆದ ಅಮೃತ ಸೋಮೇಶ್ವರ ಅವರ ಗೊಂದೋಳು, ಸತ್ಯನಾಪುರ ಸಿರಿ, ರಾಯರಾವುತೆ ಯ ಇಂಗ್ಲಿಷ್ ಅನುವಾದ ಕೃತಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಅನುವಾದವು ಎರಡು ಅಲಗಿನ ಕತ್ತಿಯಂತಿದ್ದು, ಎರಡೂ ಕಡೆಯಿಂದ ಟೀಕೆಗಳನ್ನು ಎದುರಿಸಬೇಕಾಗುತ್ತದೆ. ಆದರೂ ಅನುವಾದ ಒಂದು ಕಲೆ. ಅದನ್ನು ನಾನಾ ರೀತಿಯಲ್ಲಿ ರೂಪಿಸಬಹುದು. ಪಾಶ್ಚಿಮಾತ್ಯ ದೇಶಗಳಲ್ಲಿ ಒಂದೇ ಪುಸ್ತಕಕ್ಕೆ 10 ರಿಂದ 20ಕ್ಕೂ ಅಧಿಕ ಅನುವಾದಗಳು ಪ್ರಕಟವಾಗುತ್ತಿವೆ. ಇದರಿಂದ ಕೃತಿಗಳು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ, ಒಂದು ಜನಾಂಗದಿಂದ ಮತ್ತೊಂದು ಜನಾಂಗಕ್ಕೆ ತಲುಪಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಅಲೋಶಿಯಸ್ ವಿಶ್ವವಿದ್ಯಾಲಯದಲ್ಲಿಯೂ ಅನುವಾದ ಕೇಂದ್ರ ಪ್ರಾರಂಭವಾಗಬೇಕು ಎಂದು ಹೇಳಿದರು.

ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ಕುಲಪತಿ ಡಾ. ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ವಿಶ್ವವಿದ್ಯಾಲಯದಲ್ಲಿ ತುಳು ವಿಭಾಗ ಆರಂಭಿಸಲಾಗಿದ್ದು, ತುಳು ಪೀಠವನ್ನು ಕೂಡ ಆರಂಭಿಸುವ ಕುರಿತು ಚಿಂತನೆ ನಡೆಸಲಾಗಿದೆ ಎಂದು ಹೇಳಿದರು.

ಗೋಪಿ ಯವರು ರಚಿಸಿರುವ ತುಳು ಅಕಾಡೆಮಿಯ ವರ್ಣಮಯ ಲಾಂಛನವನ್ನು ಅನಾವರಣಗೊಳಿಸಲಾಯಿತು. ತುಳು ಸಾಹಿತ್ಯ ಅಕಾಡೆಮಿ ಮಾಜಿ ಸದಸ್ಯ ಮುದ್ದು ಮೂಡುಬೆಳ್ಳೆ, ಕೃತಿಗಳ ಅನುವಾದಕಿ ಸೈಂಟ್ ಅಲೋಶಿಯಸ್ ಪರಿಗಣಿತ ವಿವಿಯ ಆಂಗ್ಲ ಭಾಷಾ ಉಪನ್ಯಾಸಕಿ ಡಾ. ಸಿಲ್ವಿಯಾ ರೇಗೊ, ಬೆಳ್ತಂಗಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಸಹ ಪ್ರಾಧ್ಯಾಪಕ ಹಾಗೂ ಅಮೃತ ಸೋಮೇಶ್ವರರವರ ಪುತ್ರ ಡಾ. ಚೇತನ್ ಸೋಮೇಶ್ವರ, ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಉಪಸ್ಥಿತರಿದ್ದರು.

ಆಂಗ್ಲ ವಿಭಾಗದ ಮುಖ್ಯಸ್ಥೆ ಮೆಲಿಸ್ಸಾ ಗ್ಲೋರಿಯಾ, ಕನ್ನಡ ಹಾಗೂ ತುಳು ಪ್ರಾಧ್ಯಾಪಕಿ ಪ್ರಶಾಂತಿ ಶೆಟ್ಟಿ ಇರುವೈಲು ವಂದಿಸಿದರು. ಅಕಾಡೆಮಿ ಸದಸ್ಯ ಸಂಚಾಲಕ ಉದ್ಯಾವರ ನಾಗೇಶ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

*Prajavani 16-01-2026*

### ಅಮೃತ ಸೋಮೇಶ್ವರರ ನಾಟಕಗಳ ಇಂಗ್ಲಿಷ್ ಅನುವಾದ ಬಿಡುಗಡೆ

# ‘ಅನುವಾದ; ತುಳು ಪಸರಿಸಲು ಅನುಕೂಲ’

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ತರ್ಜುಮೆ, ರಂಗ ಪ್ರಯೋಗದಿಂದ ಹಿರಿಯರ ನೆನಪು
- ಅಲೋಶಿಯಸ್‌ನಲ್ಲಿ ಅನುವಾದ ಕೇಂದ್ರ ಆರಂಭವಾಗಲಿ
- ತುಳು ಅಕಾಡೆಮಿಯ ನವೀಕೃತ ಲಾಂಛನ ಅನಾವರಣ



ಇಂಗ್ಲಿಷ್‌ಗೆ ಅನುವಾದಗೊಂಡ 'ಗೋಂದೋಳು ಮತ್ತು ಇತರ ನಾಟಕ' ಕೃತಿಯನ್ನು ಬಿಡುಗಡೆಗೊಳಿಸಲಾಯಿತು :ಪ್ರಜಾವಾಣಿ ಚಿತ್ರ

ಮಂಗಳೂರು: ಅಮೃತ ಸೋಮೇಶ್ವರ ಅವರಂತಹ ಮೇರು ಬರಹಗಾರರ ತುಳು ಕೃತಿಗಳು ಇಂಗ್ಲಿಷ್ ಹಾಗೂ ಇತರ ಭಾಷೆಗಳಿಗೆ ಅನುವಾದಗೊಂಡಾಗ ತುಳುವಿನ ಸತ್ವ ಹಾಗೂ ಕಂಪು ತುಳುನಾಡಿನ ಆಚೆಗೂ ಪಸರಿಸುತ್ತದೆ ಎಂದು ನಿವೃತ್ತ ಕುಲಪತಿ ಪ್ರೊ. ಬಿ.ಎ.ವಿವೇಕ ರೈ ಹೇಳಿದರು.

ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಇಂಗ್ಲಿಷ್, ಕನ್ನಡ ಹಾಗೂ ತುಳು ವಿಭಾಗದ ಆಶ್ರಯದಲ್ಲಿ ಆಯೋಜಿಸಿದ್ದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ಅಮೃತ ಸೋಮೇಶ್ವರ ಅವರ ಇಂಗ್ಲಿಷ್‌ಗೆ ಅನುವಾದಗೊಂಡ 'ಗೋಂದೋಳು ಮತ್ತು ಇತರ ನಾಟಕ' ಕೃತಿಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಒಂದೇ ಕೃತಿಯ ಅನುವಾದವನ್ನು ಬೇರೆ ಬೇರೆ ರೀತಿಯಲ್ಲಿ ಮಾಡಬಹುದು. ಪಶ್ಚಿಮ ದೇಶಗಳಲ್ಲಿ ಒಂದು ಪುಸ್ತಕದ 10ರಿಂದ 20 ಮಾದರಿಯ ಅನುವಾದಗಳು ಪ್ರಕಟವಾಗುತ್ತಿವೆ. ನಮ್ಮಲ್ಲಿಯೂ ಅನುವಾದವನ್ನು ಒಂದು ವೃತ್ತಿಯಾಗಿ ಪರಿಗಣಿಸಬೇಕಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಅಲೋಶಿಯಸ್ ವಿವಿ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಮಾತನಾಡಿ, ವಿ.ವಿಯಲ್ಲಿ ಈಗಾಗಲೇ ತುಳು ವಿಭಾಗ ಆರಂಭಿಸಲಾಗಿದೆ. ತುಳು ಪೀಠ ಕೂಡ ಆರಂಭಿಸಲು ಉದ್ದೇಶಿಸಲಾಗಿದೆ ಎಂದರು.

ಮಂಗಳೂರು ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಸಂಯೋಜಕ ಮುದ್ದು ಮೂಡುಬೆಳ್ಳೆ ಅವರು ಅಮೃತರ ನಾಟಕಗಳ ವೈಶಿಷ್ಟ್ಯದ ಬಗ್ಗೆ ಮಾತನಾಡಿದರು.

ಕೃತಿಗಳ ಅನುವಾದಕಿ ಸಿಲ್ವಿಯಾ ರೇಗೊ ಅವರನ್ನು ಸನ್ಮಾನಿಸಲಾಯಿತು. ಬೆಳ್ತಂಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಸಹ ಪ್ರಾಧ್ಯಾಪಕ ಚೇತನ್ ಸೋಮೇಶ್ವರ, ಅಲೋಶಿಯಸ್ ವಿ.ವಿಯ ಭಾಷಾ ನಿಕಾಯದ ಡೀನ್ ಮಹಾಲಿಂಗ ಭಟ್ ಉಪಸ್ಥಿತರಿದ್ದರು.

ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಕಾಡೆಮಿಯ ಸದಸ್ಯ ಸಂಚಾಲಕ ಉದ್ಯಾವರ ನಾಗೇಶ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು. ಇಂಗ್ಲಿಷ್ ಎಂ.ಎ. ವಿದ್ಯಾರ್ಥಿಗಳು ಗೊಂದೋಳು ತುಳು ಹಾಡನ್ನು ಪ್ರಸ್ತುತಪಡಿಸಿದರು.

ಉಪನ್ಯಾಸಕಿ ಮೆಲಿಸಾ ಗೋವಿಯಸ್ ಸ್ವಾಗತಿಸಿದರು. ಉಪನ್ಯಾಸಕಿ ಪ್ರಶಾಂತಿ ಶೆಟ್ಟಿ ಇರುವೈಲು ವಂದಿಸಿದರು.

Vijayavani 18-01-2026

# ತುಳು ಸಾಹಿತ್ಯ ಅನುವಾದ ಪಸರಿಸಲಿ

## ವಿಶ್ರಾಂತ ಕುಲಪತಿ ಪ್ರೊ.ವಿವೇಕ ರೈ ಆಶಯ



ಅಮೃತ ಸೋಮೇಶ್ವರರ ನಾಟಕಗಳ ಇಂಗ್ಲಿಷ್ ಅನುವಾದವನ್ನು ಪ್ರೊ.ವಿವೇಕ ರೈ ಬಿಡುಗಡೆಗೊಳಿಸಿದರು. ಡಾ.ಪ್ರವೀಣ್ ಮಾರ್ಟಿಸ್, ಡಾ.ಚೇತನ್ ಸೋಮೇಶ್ವರ, ಡಾ.ಮಹಾಲಿಂಗ ಭಟ್ ಮತ್ತಿತರರಿದ್ದರು.

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಅಮೃತ ಸೋಮೇಶ್ವರ ಅವರಂತಹ ಮೇರು ಬರಹಗಾರರ ತುಳು ಕೃತಿಗಳು ಇಂಗ್ಲಿಷ್ ಹಾಗೂ ಇತರ ಭಾಷೆಗಳಿಗೆ ಅನುವಾದಗೊಂಡಾಗ ತುಳುವಿನ ಸತ್ವ ಹಾಗೂ ಸಂಪತ್ತು ತುಳುನಾಡಿನ ಆಚೆಗೂ ಪಸರಿಸಲು ಸಾಧ್ಯ ಎಂದು ವಿಶ್ರಾಂತ ಕುಲಪತಿ ಪ್ರೊ.ಬಿ.ಎ.ವಿವೇಕ ರೈ ಹೇಳಿದರು.

ಸಂತ ಅಲೋಶಿಯಸ್ ಪರಿಗಣಿತ ವಿವಿ ಇಂಗ್ಲಿಷ್, ಕನ್ನಡ ಹಾಗೂ ತುಳು ವಿಭಾಗದ ಆಶ್ರಯದಲ್ಲಿ ಆಯೋಜಿಸಲಾದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ಅಮೃತ ಸೋಮೇಶ್ವರ ಅವರ ಇಂಗ್ಲಿಷ್‌ಗೆ ಅನುವಾದಗೊಂಡ ಗೋಂದೋಳು ಮತ್ತು ಇತರ ನಾಟಕ ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ಸಂತ ಅಲೋಶಿಯಸ್ ಪರಿಗಣಿತ ವಿವಿ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸಿ, ವಿವಿಯಲ್ಲಿ ಈಗಾಗಲೇ ತುಳು ವಿಭಾಗ ಆರಂಭಿಸಲಾಗಿದೆ. ತುಳು ಪೀಠ ಕೂಡ ಆರಂಭಿಸಲು ಉದ್ದೇಶಿಸಲಾಗಿದೆ ಎಂದರು.

ಬೆಳ್ತಂಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಸಹ ಪ್ರಾಧ್ಯಾಪಕ ಡಾ.ಚೇತನ್ ಸೋಮೇಶ್ವರ, ಅಲೋಶಿಯಸ್ ವಿ.ವಿ ಭಾಷಾ ನಿಕಾಯದ ಡೀನ್ ಡಾ.ಮಹಾಲಿಂಗ ಭಟ್ ಉಪಸ್ಥಿತರಿದ್ದರು.

ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಪ್ರಸ್ತಾವನೆಗೈದರು. ಅಕಾಡೆಮಿ ಸದಸ್ಯ ಸಂಚಾಲಕ ಉದ್ಯಾವರ ನಾಗೇಶ್ ಕುಮಾರ್ ಕಾರ್ಯಕ್ರಮ ನಿರ್ವಹಿಸಿದರು. ಇಂಗ್ಲಿಷ್ ಎಂಎ ವಿದ್ಯಾರ್ಥಿಗಳು ಗೋಂದೋಳು ತುಳು ನಾಟಕವನ್ನು ಪ್ರಸ್ತುತಪಡಿಸಿದರು. ಇಂಗ್ಲಿಷ್ ವಿಭಾಗದ ಉಪನ್ಯಾಸಕಿ ಡಾ.ಮೆಲಿಶಾ ಗೋವಿಯಸ್ ಸ್ವಾಗತಿಸಿ, ತುಳು ವಿಭಾಗದ ಉಪನ್ಯಾಸಕಿ ಪ್ರಶಾಂತಿ ಶೆಟ್ಟಿ ಇರುವೈಲು ವಂದಿಸಿದರು.

> ಒಂದೇ ಕೃತಿಯ ಅನುವಾದ ಬೇರೆ ಬೇರೆ ರೀತಿಯಲ್ಲಿ ಮಾಡಬಹುದು. ಪಶ್ಚಿಮ ದೇಶಗಳಲ್ಲಿ ಒಂದು ಪುಸ್ತಕದ 10ರಿಂದ 20 ಬೇರೆ ಬೇರೆ ಮಾದರಿಯ ಅನುವಾದಗಳು ಪ್ರಕಟವಾಗುತ್ತಿವೆ, ನಮ್ಮಲ್ಲಿಯೂ ಅನುವಾದವನ್ನು ಒಂದು ವೃತ್ತಿಯಾಗಿ ಪರಿಗಣಿಸಬೇಕಿದೆ. ಸಂತ ಅಲೋಶಿಯಸ್ ಪರಿಗಣಿತ ವಿವಿಯಲ್ಲಿಯೂ ಅನುವಾದ ಕೇಂದ್ರ ಆರಂಭವಾಗಲಿ.
>
> | ವಿವೇಕ ರೈ ವಿಶ್ರಾಂತ ಕುಲಪತಿ

### ಗೌರವಾರ್ಪಣೆ

ಮಂಗಳೂರು ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಸಂಯೋಜಕ ಮುದ್ದು ಮೂಡುಬೆಳ್ಳೆ, ಅಮೃತರ ನಾಟಕಗಳ ವೈಶಿಷ್ಟ್ಯದ ಬಗ್ಗೆ ಮಾತನಾಡಿದರು. ಕಲಾವಿದ ಗೋಪಿ, 1994ರಲ್ಲಿ ರಚಿಸಿರುವ ತುಳು ಅಕಾಡೆಮಿಯ ಲಾಂಛನ ಅವರೇ ಪರ್ಯಾಯವಾಗಿ ಮರು ವಿನ್ಯಾಸಗೊಳಿಸಿದ್ದು, ಪ್ರೊ.ವಿವೇಕ ರೈ ಅನಾವರಣಗೊಳಿಸಿದರು. ಕೃತಿಗಳ ಅನುವಾದಕಿ ಸಂತ ಅಲೋಶಿಯಸ್ ಪರಿಗಣಿತ ವಿ.ವಿಯ ಆಂಗ್ಲ ಭಾಷಾ ಉಪನ್ಯಾಸಕಿ ಡಾ.ಸಿಲ್ವಿಯಾ ರೇಗೋ ಅವರನ್ನು ಸನ್ಮಾನಿಸಲಾಯಿತು.

## ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಆಸಕ್ತಿ ಉದ್ದೀಪನ

■ ಡಾ.ಗ್ರೀಷ್ಮಾ ಆಳ್ವ ಅನಿಸಿಕೆ

■ ಇಂಗ್ಲಿಷ್ ಪಠ್ಯಪುಸ್ತಕಗಳ ಬಿಡುಗಡೆ

ಮೂಡುಬಿದಿರೆ: ಸಾಹಿತ್ಯಿಕ ವೇದಿಕೆಗಳು ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಬಗೆಗಿನ ಆಸಕ್ತಿ ಉದ್ದೀಪನಗೊಳಿಸುತ್ತವೆ. ಸಾರ್ವಜನಿಕ ಭಾಷಣದ ಕೌಶಲ ಕೇವಲ ಹುಟ್ಟಿನಿಂದ ಬರುವುದಿಲ್ಲ. ಅದು ನಿರಂತರ ಅಭ್ಯಾಸದಿಂದ ರೂಢಿಸಿಕೊಳ್ಳಬಹುದಾದ ಗುಣ ಎಂದು ಆಳ್ವ ಫಾರ್ಮಸಿಯ ಆಡಳಿತಾಧಿಕಾರಿ ಡಾ.ಗ್ರೀಷ್ಮಾ ಆಳ್ವ ಹೇಳಿದರು.

ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಒಲವು ಮತ್ತು ಸಂವಹನ ಕೌಶಲ ಬೆಳೆಸುವ ನಿಟ್ಟಿನಲ್ಲಿ ಆಳ್ವಾಸ್ ಕಾಲೇಜಿನ ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ವಿಭಾಗದ ವತಿಯಿಂದ ಸಾಹಿತ್ಯಿಕ ಸಂಘ ಮೆಟಾಫೋರಿಯಾದ ಉದ್ಘಾಟನೆ ಹಾಗೂ ಹೊಸ ಪಠ್ಯಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ ಶುಕ್ರವಾರ ಮಾತನಾಡಿದರು.

ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಡಾ.ಟಿ.ಕೆ.ರವೀಂದ್ರನ್ ಅಧ್ಯಕ್ಷತೆ ವಹಿಸಿದ್ದರು. ವಿಭಾಗದ ಹೊಸ ಪಠ್ಯಪುಸ್ತಕಗಳಾದ [illegible], [illegible] ಮತ್ತು ರೆಸೋನೆನ್ಸ್ ಕೃತಿ ಬಿಡುಗಡೆ ಮಾಡಲಾಯಿತು. ಸ್ನಾತಕೋತ್ತರ ವಿಭಾಗದ ಸಂಯೋಜಕಿ ಜುಲಿಯಾನಾ ರೋಡ್ರಿಗಸ್, ಪದವಿ ವಿಭಾಗದ ಸಂಯೋಜಕಿ ಚಂದ್ರಿಕಾ ಶೆಟ್ಟಿಗಾರ್, ಸಂಯೋಜಕ ರವಿ ಶೆಟ್ಟಿ ಉಪಸ್ಥಿತರಿದ್ದರು.

ವಿಭಾಗದ ವತಿಯಿಂದ ನಡೆದ ಪದ್ಯ ರಚನೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಪ್ರೇರಣಾ ಜೈನ್(ದ್ವಿತೀಯ ಬಿಎಸ್ಸಿ ಎಫ್‌ಎನ್‌ಡಿ) ಹಾಗೂ ದ್ವಿತೀಯ ಪಡೆದ [illegible] ವಾಂಖಾರ್(ದ್ವಿತೀಯ ಎಂಎಸ್‌ಡಬ್ಲ್ಯು) ಅವರಿಗೆ ನಗದು ಬಹುಮಾನ ವಿತರಿಸಲಾಯಿತು. ನಿಯಾಶಿ ಅಮೀನ್ ನಿರೂಪಿಸಿದರು, ವಿಲ್ಸನ್ ರೋಡ್ರಿಗಸ್ ವಂದಿಸಿದರು.



ಆಳ್ವಾಸ್ ಕಾಲೇಜಿನಲ್ಲಿ ಮೆಟಾಫೋರಿಯಾ ಸಾಹಿತ್ಯಿಕ ಸಂಘ ಉದ್ಘಾಟಿಸಲಾಯಿತು. ಡಾ.ಟಿ.ಕೆ.ರವೀಂದ್ರನ್, ಜುಲಿಯಾನಾ ರೋಡ್ರಿಗಸ್, ಚಂದ್ರಿಕಾ ಶೆಟ್ಟಿಗಾರ್, ರವಿ ಶೆಟ್ಟಿ ಉಪಸ್ಥಿತರಿದ್ದರು.

*Times of India 17-01-2026*

# Aloy Quiz-Whiz 2026 tomorrow

St Aloysius Higher Primary School, along with its Alumni Association, a constituent unit of the St Aloysius College Alumni Association (SACAA), Mangaluru, will organise Aloy Quiz-Whiz 2026 on Sunday. UT Khader, speaker of the Karnataka legislative assembly, will attend the event as the chief guest. The competition stands out for its strong emphasis on inclusivity. Each participating team will consist of 10 members, including one visually impaired student, one with speech and hearing impairment, one from a govt school, and two students from a private school. The initiative aims to highlight the abilities of specially abled children, demonstrating that they are on par with their peers, while also sensitising young participants to natural barriers and encouraging inclusive interactions from an early age. The quiz will be conducted in two semi-final rounds, followed by a grand finale featuring six selected teams.

Varthabharathi 21-01-2026

# ಸೈಂಟ್ ಅಲೋಶಿಯಸ್ ಶಾಲೆಯಲ್ಲಿ 'ಅಲೋಯ್ ಕ್ವಿರ್ಝ್-ವಿರ್ಝ್'



ಮಂಗಳೂರು, ಜ.20: ಸೈಂಟ್ ಅಲೋಶಿಯಸ್ ಹಿರಿಯ ಪ್ರಾಥಮಿಕ ಶಾಲಾ ಹಳೆ ವಿದ್ಯಾರ್ಥಿ ಸಂಘ, ಸೈಂಟ್ ಅಲೋಶಿಯಸ್ ಕಾಲೇಜು ಹಳೆ ವಿದ್ಯಾರ್ಥಿ ಸಂಘದ ಸಹಯೋಗದೊಂದಿಗೆ ಕೊಡಿಯಾಲ್‌ಬೈಲ್ ಶಾಲಾ ಆವರಣದಲ್ಲಿ ರವಿವಾರ 'ಅಲೋಯ್ ಕ್ವಿರ್ಝ್-ವಿರ್ಝ್ 2026'ನ್ನು ಆಯೋಜಿಸಲಾಗಿತ್ತು.

ಒಟ್ಟು 15 ಶಾಲೆಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಪ್ರತಿಯೊಂದು ತಂಡದಲ್ಲೂ ದೃಷ್ಟಿ ದೋಷವುಳ್ಳ, ಶ್ರವಣ ಮತ್ತು ವಾಕ್ ದೋಷವುಳ್ಳ ವಿದ್ಯಾರ್ಥಿಗಳು ಹಾಗೂ ಸರಕಾರಿ ಮತ್ತು ಖಾಸಗಿ ಶಾಲಾ ವಿದ್ಯಾರ್ಥಿಗಳು ಇದ್ದರು.

ವಿಶೇಷ ಚೇತನ ಮಕ್ಕಳ ಸಾಮರ್ಥ್ಯದ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವುದು ಮತ್ತು ಯುವ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ವೈವಿಧ್ಯತೆಯ ಬಗ್ಗೆ ಸಂವೇದನೆ ಮೂಡಿಸುವುದು ಈ ರಸಪ್ರಶ್ನೆಯ ಮುಖ್ಯ ಉದ್ದೇಶವಾಗಿತ್ತು.

ಈ ಸ್ಪರ್ಧೆಯಲ್ಲಿ, ರೋಮನ್ ಮತ್ತು ಕ್ಯಾಥರೀನ್ ಲೋಬೊ ಶಾಲೆ, ಎಸ್‌ಡಿಎಂ ಮಂಗಳಜ್ಯೋತಿ ಇಂಟಿಗ್ರೇಟೆಡ್ ಶಾಲೆ, ಸೈಂಟ್ ಅಲೋಶಿಯಸ್ ಗೊನ್ಝಾಗ ಶಾಲೆ ಮತ್ತು ಕಾಪಿಕಾಡ್ ದ.ಕ. ಜಿ.ಪಂ. ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ತಂಡ ಪ್ರಥಮ ಸ್ಥಾನ ಗಳಿಸಿತು. ವಿಜೇತ ತಂಡದಲ್ಲಿ ಆರ್ಯ, ಯು.ಅಮೀನ ನಿಧಾ, ಅವಿಕಾ ಜೋಶಿ, ವಿಷ್ಣು ದೇವ್ ಪಾಂಡೆ ಮತ್ತು ದಿಲೀಪ್ ಎಲ್.ಡಿ. ಇದ್ದರು.

ಶ್ರೀ ಮನ್ಯಾ, ಶಿವರಾಮ್ ನಾಯಕ್, ಅನ್ಮೋಲ್ ಚೆರಿಶ್ ಸಲ್ಡಾನ್ಹ, ಕ್ರಿಸ್ ಶಾನ್ ಡಿಸೋಜ, ಸ್ನೇಹಾ ಅವರ ತಂಡ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿತು.

ಸೈಂಟ್ ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ಫಾ.ಮೆಲ್ವಿನ್ ಪಿಂಟೊ ಎಸ್.ಜೆ. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಮಗ್ರ ಶಿಕ್ಷಣ ಮತ್ತು ಸಾಮಾಜಿಕ ಜಾಗೃತಿಯಲ್ಲಿ ಇಂತಹ ಒಳಗೊಳ್ಳುವಿಕೆಯ ಮಹತ್ವವನ್ನು ಶ್ಲಾಘಿಸಿದರು. ರೋಮನ್ ಮತ್ತು ಕ್ಯಾಥರೀನ್ ವಿಕಲಚೇತನರ ಶಾಲೆಯ ಪ್ರಾಂಶುಪಾಲ ಕ್ಯಾಲಿಸ್ಟಸ್ ಡಿಸೋಜ, ಹಳೆ ವಿದ್ಯಾರ್ಥಿ ದೀಪಕ್ ರಮಣಿ ಮಾತನಾಡಿದರು.

ಶಾಲೆಯ ಮುಖ್ಯೋಪಾಧ್ಯಾಯಿನಿ ಜೋಸಿತಾ ಸಿಕ್ವೇರ ಸ್ವಾಗತಿಸಿದರು. ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ನೀಲ್ ರೋಡ್ರಿಗಸ್ ವಂದಿಸಿದರು. ಸೈಂಟ್ ಅಲೋಶಿಯಸ್ ವಿವಿಯ ಸ್ನಾತಕೋತ್ತರ ವಿದ್ಯಾರ್ಥಿನಿ ನೀರದಾ ಕಾರ್ಯಕ್ರಮ ನಿರೂಪಿಸಿದರು.

Udayavani 18-01-2026

# ಆ ಬಾಲ್ಯದ ದಿನಗಳೇ ಚಂದ...

ಮಕ್ಕಳಾಗಿದ್ದಾಗ ಶಾಲೆ ಆರಂಭವಾಗುವ ಮೊದಲೇ ಶಾಲೆಗೆ ತಲುಪುತ್ತಿದ್ದೆವು. ತರಗತಿ ಶುರುವಾಗುವ ಮುನ್ನ ಶಿಕ್ಷಕರು ಮತ್ತು ಮಕ್ಕಳೆಲ್ಲರೂ ಒಂದೇ ಸಾಲಿನಲ್ಲಿ ನಿಂತು ರಾಷ್ಟ್ರಗೀತೆ, ನಾಡಗೀತೆ ಹಾಡುತ್ತಿದ್ದ ಕ್ಷಣಗಳು ಇನ್ನೂ ನೆನಪಿನಲ್ಲಿವೆ. ಅದರ ಜತೆಗೆ ಅಂದಿನ ಸುದ್ದಿ ಸಮಾಚಾರವನ್ನು ಕೇಳುತ್ತಾ, ಯಾರಾದರೂ ಹುಟ್ಟುಹಬ್ಬವಿದ್ದರೆ ಎಲ್ಲರೂ ಸೇರಿ ಹಾಡಿ ಶುಭಾಶಯ ಕೋರಿ, ಅನಂತರ ತರಗತಿಗೆ ತೆರಳುತ್ತಿದ್ದೆವು.

ಸಂಜೆಯಾಗುತ್ತಿದ್ದಂತೆ ಮನೆಯಲ್ಲಿ ಅಮ್ಮ ಯಾವ ತಿಂಡಿ ಮಾಡಿರುತ್ತಾಳೆಂಬ ಕುತೂಹಲದಲ್ಲಿ, ಭಾರದ ಬ್ಯಾಗ್ ಅನ್ನು ಎತ್ತಿಕೊಂಡು ಓಡುತ್ತ ಮನೆ ಸೇರುತ್ತಿದ್ದೆವು. ಬೇಗನೆ ಸ್ನಾನ ಮುಗಿಸಿ, ಒಂದಿಷ್ಟು ತಿಂಡಿ ಸೇವಿಸಿದ ಬಳಿಕ ಅಮ್ಮ ಓದಿಸುತ್ತಿದ್ದಳು. ಸಮಯಕ್ಕೆ ಸರಿಯಾದ ಊಟ, ನಿದ್ದೆ, ಆಟ, ಪಾಠ ಜೀವನವೆಂದರೆ ಅಷ್ಟೇ ಸರಳವಾಗಿತ್ತು. ಶಾಲೆಯಲ್ಲಿ ಯಾವ ಸ್ಪರ್ಧೆಯಿದ್ದರೂ ಒಂದು ಕ್ಷಣವೂ ಯೋಚಿಸದೆ ಉತ್ಸಾಹದಿಂದ ಭಾಗವಹಿಸುತ್ತಿದ್ದೆವು.

ಆದರೆ ನಾವು ಬೆಳೆದು ಕಾಲೇಜಿನ ಮೆಟ್ಟಿಲೇರಿದಂತೆ, ನಮಗೆ ತಿಳಿಯದೇ ನಾವೇ ಬದಲಾಗುತ್ತೇವೆ. ಶಾಲೆಯ ದಿನಚರಿ ಇಲ್ಲವಾಗುತ್ತದೆ. ಎಲ್ಲರೂ ಸೇರಿ ನಿಂತು ರಾಷ್ಟ್ರಗೀತೆ, ನಾಡಗೀತೆ ಹಾಡುವ ಸಂಭ್ರಮವೂ ಇಲ್ಲ, ನಿದ್ದೆಯಂತೂ ನಮ್ಮ ಜೀವನದಿಂದ ನಿಧಾನವಾಗಿ ದೂರ ಸರಿಯುತ್ತದೆ. ತರಗತಿ ಇಡೀ ದಿನ ಇರದಿದ್ದರೂ, ಒಂದೆರಡು ಗಂಟೆ ಕೂತರೆ ಸಾಕು ಆಯಾಸ ಕಾಡುತ್ತದೆ.

ಒಮ್ಮೆ ಸಂಜೆ ಮನೆಗೆ ಹೋಗಿ ಅಮ್ಮನ ತಿಂಡಿಗಾಗಿ ಕಾದಿದ್ದ ನಾವು, ಈಗ ಪಿಜಿ ಅಥವಾ ಹಾಸ್ಟೆಲ್‌ಗೆ ಹೋಗಿ ಮಲಗಿದರೆ ಸಾಕು ಎಂಬ ಮನಸ್ಥಿತಿಗೆ ಬಂದಿದ್ದೇವೆ. ಶಾಲೆಯಿಂದ ಮನೆಗೆ ಬಂದ ಕೂಡಲೇ ಆಟವಾಡಲು ಓಡುತ್ತಿದ್ದ ನಾವು, ಈಗ ಕಾಲೇಜು ಮುಗಿಸಿ ಬಂದು ನಿದ್ದೆ ಮಾಡಿ, ಅನಂತರ ಫೋನ್, ಕಂಪ್ಯೂಟರ್, ಲ್ಯಾಪ್‌ಟಾಪ್ ಹಿಡಿದು ಕೂತರೆ ಸಮಯ ಹೋದರು ಗೊತ್ತಾಗುವುದೇ ಇಲ್ಲ, ಸರಿಯಾದ ಸಮಯಕ್ಕೆ ಊಟವಿಲ್ಲ, ನಿದ್ದೆಯಂತೂ ಪ್ರಶ್ನೆಯೇ ಅಲ್ಲ.

ಒಂದು ಕಾಲದಲ್ಲಿ ಮನೆಗೆ ನೆಂಟರು ಬರುತ್ತಾರೆ ಎಂದರೆ ಖುಷಿಯಿಂದ ಓಡಾಡುತ್ತಿದ್ದ ನಾವು, ಇಂದು ನಾವೇ ನಮ್ಮ ಮನೆಯ ನೆಂಟರಂತೆ ಆಗಾಗ್ಗೆ ಹೋಗಿ ಬರುವ ಅತಿಥಿಗಳಾಗಿದ್ದೇವೆ. ಬಾಲ್ಯದ ಸರಳತೆ, ಶಿಸ್ತು ಮತ್ತು ಸಂತೋಷ ಎಲ್ಲವು ನೆನಪುಗಳಾಗಿ ಮಾತ್ರ ಉಳಿದಿವೆ. ಕಾಲ ಬದಲಾಗಿದೆ, ಬದುಕು ಬದಲಾಗಿದೆ ಆದರೆ ಆ ದಿನಗಳ ಮೌಲ್ಯ ಮಾತ್ರ ಇನ್ನೂ ಮನದೊಳಗೆ ಜೀವಂತವಾಗಿದೆ. ■




• ಧನ್ಯ ದೇಚಮ್ಮ ಟಿ.ಎ.
ಸಂತ ಅಲೋಶಿಯಸ್ ಪರಿಗಣಿತ ವಿವಿ, ಮಂಗಳೂರು

*Times of India*
*20-01-2026*

# International conference organised at Aloysius

**Mangaluru:** The St Aloysius College Teachers' Cooperative Credit (SACTCC) Society, Mangaluru, in collaboration with the school of commerce, finance and accountancy, St Aloysius (Deemed to be University), organised an international conference on 'Power of Co-operatives in Sustainable Development' recently.

The conference was held as part of the golden jubilee celebrations of the SACTCC Society.

The conference explored the pivotal role of cooperatives in addressing global challenges and fostering sustainable development. Academicians, industry experts, and researchers participated. Yashavantha Dongre, chief guest, emphasised cooperatives as both a way of life and a sustainable business model. TNN

*Lokmatha 21-01-2026*

# शैक्षणिक व संशोधन सहकार्यासाठी एक पाऊल पुढे

**केपे महाविद्यालयाचा सेंट ॲलॉयसियस विद्यापीठाशी सामंजस्य करार**

लोकमत न्यूज नेटवर्क

**केपे :** केपे येथील कला, विज्ञान आणि वाणिज्य शासकिय महाविद्यालय आणि कर्नाटकातील मंगळुरू येथील सेंट ॲलॉयसियस विद्यापीठ यांच्यात शैक्षणिक व संशोधन सहकार्य वाढविण्यासाठी सोमवारी सामंजस्य करार करण्यात आला.

हा उपक्रम शासकिय महाविद्यालय, केपे येथील पदव्युत्तर कोंकणी विभाग आणि कोंकणी संशोधन केंद्र यांच्या पुढाकाराने राबविण्यात आला.

या करारप्रसंगी शासकीय महाविद्यालय, केपे येथील पदव्युत्तर कोंकणी विभागाचे प्रमुख प्रा. डॉ. राजय पवार उपस्थित होते. त्यांच्यासोबत केपे महाविद्यालयातील पदव्युत्तर कोंकणी विभागातील प्रा. दीपराज सातार्डेकर हेही उपस्थित होते.

सेंट ॲलॉयसियस विद्यापीठाच्या वतीने कुलगुरू रेव्ह. डॉ. प्रविण मार्टिस एस.जे., निबंधक डॉ. रोनाल्ड नाझरेथ यांनी प्रमुख भूमिका पार पाडली. या कार्यक्रमाला मंगळुरू येथील कोंकणी इन्स्टिट्यूटच्या फ्लोरा कॅस्टेलिनो यांनीही उपस्थिती लावली.



सामंजस्य करार झाल्यानंतर शासकीय महाविद्यालय, केपे येथील पदव्युत्तर कोंकणी विभागाचे प्रमुख प्रा. डॉ. राजय पवार, कुलगुरू रेव्ह. डॉ. प्रवीण मार्टिस एस.जे., निबंधक डॉ. रोनाल्ड नाझारेथ व प्रा. दीपराज सातार्डेकर.

या सामंजस्य करारामुळे आंतरविद्याशाखीय संशोधनाला चालना मिळणार आहे. तसेच महाविद्यालयातील कला, विज्ञान आणि वाणिज्य या सर्व शाखांतील विभागांना या कराराचा लाभ होणार आहे.

तसेच दोन्ही संस्थांची ग्रंथालये, संशोधन प्रयोगशाळा आणि तज्ज्ञ संसाधनांचा प्राध्यापक व विद्यार्थ्यांना अधिकाधिक उपयोग करता येणार आहे, अशी माहिती डॉ. राजय पवार यांनी दिली.

*Udayavani 21-01-2026*

# ಅಲೋಶಿಯಸ್‌ನಲ್ಲಿ ಹಳೆ ವಿದ್ಯಾರ್ಥಿಗಳ ಪುನರ್ಮಿಲನ



**ಮಹಾನಗರ, ಜ. 20:** ಸಂತ ಅಲೋಶಿಯಸ್ ಪ್ರೌಢಶಾಲಾ ಮೈದಾನದಲ್ಲಿ ನಡೆದ ವಾರ್ಷಿಕ ಅಲೋಶಿಯಸ್ ಹಳೆಯ ವಿದ್ಯಾರ್ಥಿಗಳ ಪುನರ್ಮಿಲನವು ಸಂಗೀತ, ಹಾಡುಗಾರಿಕೆ, ನೃತ್ಯ ಮತ್ತು ಆಟಗಳೊಂದಿಗೆ ಸಂಭ್ರಮವಾಗಿ ಹೊರಹೊಮ್ಮಿತು.

147 ವರ್ಷಗಳ ವೈಭವಯುತ ಮತ್ತು ಸ್ಫೂರ್ತಿದಾಯಕ ಇತಿಹಾಸವನ್ನು ಹೊಂದಿರುವ ಸಂತ ಅಲೋಶಿಯಸ್ ಕಾಲೇಜು 2030ರಲ್ಲಿ 150 ವರ್ಷಗಳ ಮಹೋತ್ಸವಕ್ಕೆ ಸಜ್ಜಾಗುತ್ತಿರುವ ಸಮಯದಲ್ಲಿ ಇದು ಒಂದು ವಿಶೇಷ ಕಾರ್ಯಕ್ರಮವಾಗಿತ್ತು.

ಮಾಜಿ ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳು ನಿವೃತ್ತ ಮತ್ತು ಪ್ರಸ್ತುತ ಸಿಬ್ಬಂದಿ ಸದಸ್ಯರು, ಜೆಸ್ಯೂಟ್ ಫಾದರ್‌ಗಳು, ಸ್ನೇಹಿತರು, ಹಿತೈಷಿಗಳು, ದಾನಿಗಳು ಮತ್ತು ಪ್ರಾಯೋಜಕರು ಸೇರಿದಂತೆ 500 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಆಲ್ಫಾ ರಿದಮ್ಸ್ ಸಂಗೀತ ಬ್ಯಾಂಡ್ ಪ್ರೇಕ್ಷಕರನ್ನು ರಂಜಿಸಿದರು.

ರೆ। ವಂ। ಮೆಲ್ವಿನ್ ಪಿಂಟೊ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಎಸ್‌ಎಸಿಎಎ ಅಧ್ಯಕ್ಷ ಅನಿಲ್ ಕುಮಾರ್ ಅವರು ಮಾತನಾಡಿದರು.

ಸಂಚಾಲಕ ಎಡ್ಮಂಡ್ ಫ್ರಾಂಕ್ ಸ್ವಾಗತಿಸಿದರು. ಡಾ। ರೆಜಿ ಜಾನ್ ನಿರೂಪಿಸಿದರು. ಕಾನ್ರಾಡ್ ನಜರೆತ್ ವಂದಿಸಿದರು.

*Times of India 21-01-2026*

## Aloysian Alumni Reunion held

The annual Aloysian Alumni Reunion was held recently, drawing over 500 former students and their families, retired and present staff members, Jesuit priests, friends, well-wishers, benefactors, and sponsors. Alumni from different batches were seen reconnecting with classmates, sharing hostel memories, and recalling school-day experiences, as the gathering served as an occasion to renew ties with their alma mater. The reunion was held at St Aloysius College, with a 147-year history.

*Indian Express 21-01-2026*

## Ex-principal of St Aloysius College Fr Leo D'Souza is no more



Mangaluru: Fr Leo D'Souza, former principal and Rector of St Aloysius College institutions, Mangaluru, and director of the Laboratory of Applied Biology, passed away in Mangaluru on Tuesday. He was 93. Born in Mangaluru and educated at St Aloysius Institutions, Fr D'Souza went on to become a world-acclaimed botanist and a pioneer in tissue culture research. He completed his Ph.D. studies at the Max Planck Institute, Germany, and later established the Laboratory of Applied Biology at St Aloysius College (Autonomous), Mangaluru. .As an educationist and Jesuit leader, he served as Principal of St Aloysius College and as Rector of the St Aloysius College institutions, playing a key role in the institution's growth, including the introduction of co-education in 1986. He recently marked sixty years of Jesuit priesthood. ENS

*Times of India 21-01-2026*

## Former Aloysius principal Fr Leo D'Souza passes away

TIMES NEWS NETWORK

**Mangaluru:** Rev **Fr Leo D'Souza**, former principal and rector of St Aloysius institutions, Mangaluru, and director of Laboratory of Applied Biology, died on Tuesday.



He was 93. Born in Mangaluru and educated at St Aloysius institutions, Fr D'Souza became an acclaimed botanist and a pioneer in tissue culture research.

He completed his PhD at Max Planck Institute, Germany, and later established the Laboratory of Applied Biology at St Aloysius College (Autonomous) here.

His articles were published in international scientific journals, and he was known for strengthening research culture and scientific training among students.

He served as the principal of St Aloysius College from 1980 to 1990 and as rector of the St Aloysius institutions from 1992 to 1998, contributing to the institution's growth, including the introduction of co-education in 1986.

**60 yrs of Jesuit priesthood**

He recently marked 60 years of Jesuit priesthood.

In July 2025, he received Canisius Medal at IAJU-2025 Assembly in Bogotá, Colombia, in recognition of his contribution to higher education and spiritual leadership. The funeral mass will be held at Divine Mercy Church, Fatima Retreat House, Mangaluru, on Jan 22 at 3 pm, followed by burial at the Jesuit Cemetery, Mangaluru.

Prajavani 21-01-2026

## ಲಿಯೊ ಡಿಸೋಜ

ಮಂಗಳೂರು: ನಗರದ ಹೆಸರಾಂತ ಸಸ್ಯವಿಜ್ಞಾನಿ, ಸೇಂಟ್ ಅಲೋಷಿಯಸ್ ಕಾಲೇಜಿನ ಮಾಜಿ ರೆಕ್ಟರ್ ಫಾ.ಲಿಯೊ ಡಿಸೋಜ (93) ಅವರು ನಗರದ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.



ಫಾ.ಲಿಯೊ ಡಿಸೋಜ

ಜರ್ಮನಿಯ ಮ್ಯಾಕ್ಸ್ ಪ್ಲಾಂಕ್ ಇನ್‌ಸ್ಟಿಟ್ಯೂಟ್‌ನಲ್ಲಿ ಪಿಎಚ್‌ಡಿ ಅಧ್ಯಯನ ನಡೆಸಿದ್ದ ಅವರು ಸಸ್ಯ ವಿಜ್ಞಾನದಲ್ಲಿ ನಡೆಸಿದ್ದ ಸಂಶೋಧನೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆದಿದ್ದವು. ಅವರ ಸಂಶೋಧನಾ ಪ್ರಬಂಧಗಳು ಜಗತ್ತಿನ ಹೆಸರಾಂತ ವಿಜ್ಞಾನ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ.

ಕೊಲಂಬಿಯಾದ ಬೊಗೋಟಾದಲ್ಲಿ ಇಂಟರ್ ನ್ಯಾಷನಲ್ ಅಸೋಸಿಯೇಷನ್ ಆಫ್ ಜೇಸ್ಯೂಟ್ ಯೂನಿವರ್ಸಿಟೀಸ್ ವತಿಯಿಂದ ಅವರು ಕ್ಯಾನಿಸಿಯಸ್ ಪದಕ ಗೌರವಕ್ಕೆ 2025ರಲ್ಲಿ ಪಾತ್ರವಾಗಿದ್ದರು.

ನಗರದ ಫಾತಿಮಾ ರಿಟ್ರೀಟ್ ಹೌಸ್‌ನ ಡಿವೈನ್ ಮರ್ಸಿ ಚರ್ಚ್‌ನಲ್ಲಿ ಇದೇ 22ರಂದು ಅವರ ಅಂತಿಮ ಪ್ರಾರ್ಥನಾ ವಿಧಿಗಳನ್ನು ನೆರವೇರಿಸಿ ಬಳಿಕ ಜಸ್ಯೂಟ್ ಸಿಮೆಟರಿಯಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಮೂಲಗಳು ತಿಳಿಸಿವೆ.

Samyukta Karnataka 21-01-2026

## ರೆ.ಫಾ.ಲಿಯೋ ಡಿ'ಸೋಜಾ ನಿಧನ

**ಮಂಗಳೂರು:** ಸಸ್ಯಶಾಸ್ತ್ರ ಸಂಶೋಧನೆಗೆ ಹೆಸರುವಾಸಿಯಾದ ವಿಜ್ಞಾನಿ, ಮಾಜಿ ರೆಕ್ಟರ್, ಸಂತ ಅಲೋಶಿಯಸ್ ಕಾಲೇಜಿನ ಪ್ರಾಂಶುಪಾಲರಾದ ರೆ.ಫಾ.ಲಿಯೋ ಡಿ'ಸೋಜಾ ಎಸ್.ಜೆ. ಮಂಗಳವಾರ ಮಂಗಳೂರಿನ ಫಾದರ್ ಮುಲ್ಲರ್ಸ್ ಆಸ್ಪತ್ರೆಯಲ್ಲಿ ನಿಧನರಾದರು.



ಅವರು ಸರಳತೆ, ದೂರದೃಷ್ಟಿಯ ನಾಯಕತ್ವ ಮತ್ತು ಬಡವರ ಮೇಲಿನ ಸಹಾನುಭೂತಿಯ ಸ್ವಭಾವದವರಾಗಿದ್ದರು. ಮೃತರ ನಿಧನಕ್ಕೆ ಕಾಲೇಜಿನ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು, ಒಡನಾಟದಲ್ಲಿದ್ದ ಫಾ. ಲಿಯೋ, ಅವರ ಆಪ್ತ ಕುಟುಂಬ ಮತ್ತು ಸಂತ ಅಲೋಶಿಯಸ್ ಸಂತಾಪ ಸೂಚಿಸಿದೆ.

Udayavani 21-01-2026

### ವಂ| ಲಿಯೋ ಡಿ'ಸೋಜಾ



ಮಂಗಳೂರು, ಜ. 20: ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ಮಾಜಿ ರೆಕ್ಟರ್, ನಿವೃತ್ತ ಪ್ರಾಂಶುಪಾಲ, ಅನ್ವಯಿಕ ಜೀವಶಾಸ್ತ್ರ ವಿಭಾಗದ ಪ್ರಯೋಗಾಲಯ ನಿರ್ದೇಶಕರಾಗಿದ್ದ ವಂ| ಲಿಯೋ ಡಿ'ಸೋಜಾ ಎಸ್.ಜೆ. (93) ಅವರು ಜ. 20ರಂದು ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು.

ಮಂಗಳೂರಿನಲ್ಲಿ ಜನಿಸಿದ ಅವರು ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆಗಳಲ್ಲೇ ಶಿಕ್ಷಣ ಪಡೆದಿದ್ದರು. ಜಾಗತಿಕ ಖ್ಯಾತಿಯ ಸಸ್ಯ ಶಾಸ್ತ್ರಜ್ಞರಾಗಿದ್ದ ಅವರು ಟಿಷ್ಯೂ ಕಲ್ಚರ್ ಸಂಶೋಧನೆಯಲ್ಲಿ ಮೊದಲಿಗರಾಗಿದ್ದರು. ಜರ್ಮನಿಯ ದಿ ಮ್ಯಾಕ್ಸ್ ಪ್ಲ್ಯಾಂಕ್ ಇನ್ ಸ್ಟಿಟ್ಯೂಟ್‌ನಲ್ಲಿ ಪಿಎಚ್.ಡಿ. ಮುಗಿಸಿದ್ದರು. ಸಂತ ಅಲೋಶಿಯಸ್ ಕಾಲೇಜಿನಲ್ಲಿ ಅನ್ವಯಿಕ ಜೀವಶಾಸ್ತ್ರದ ಪ್ರಯೋಗಾಲಯ ಸ್ಥಾಪಿಸಿದ್ದರು. ಅಂತಾರಾಷ್ಟ್ರೀಯ ವೈಜ್ಞಾನಿಕ ಜರ್ನಲ್‌ಗಳನ್ನು ಪ್ರಕಟಿಸಿದ್ದರು. ವಿದ್ಯಾರ್ಥಿಗಳಲ್ಲಿ ಸಂಶೋಧನಾ ಸಂಸ್ಕೃತಿ ಮತ್ತು ವೈಜ್ಞಾನಿಕ ತರಬೇತಿಯನ್ನು ಉತ್ತೇಜಿಸಿ ಪರಿಚಿತರಾಗಿದ್ದರು. ಉನ್ನತ ಶಿಕ್ಷಣ ಮತ್ತು ಆಧ್ಯಾತ್ಮಿಕ ನಾಯಕತ್ವಕ್ಕೆ ನೀಡಿದ ವಿಶೇಷ ಕೊಡುಗೆಗಾಗಿ 2025ರ ಜುಲೈಯಲ್ಲಿ ಕೊಲಂಬಿಯಾದ ಬೊಗೋಟಾ ದಲ್ಲಿ ನಡೆದ ಐಎಜೆಯು 2025 (ಅಸೋಸಿಯೇಶನ್ ಆಫ್ ಜೆಸುಯಿಟ್ ಯುನಿವರ್ಸಿಟೀಸ್) ಅಸೆಂಬ್ಲಿಯಲ್ಲಿ ಕ್ಯಾನಿಸಿಯಸ್ ಪದಕ ಪಡೆದಿದ್ದರು.

Varthabharathi 21-01-2026

## ನಿಧನ

# ಅಲೋಶಿಯಸ್ ಕಾಲೇಜಿನ ಮಾಜಿ ರೆಕ್ಟರ್ ಫಾ.ಲಿಯೋ ಡಿಸೋಜ



ಮಂಗಳೂರು, ಜ.20: ಸಂತ ಅಲೋಶಿಯಸ್ ಕಾಲೇಜಿನ ಮಾಜಿ ರೆಕ್ಟರ್, ಪ್ರಾಂಶುಪಾಲ ಫಾ.ಲಿಯೋ ಡಿಸೋಜ ಎಸ್‌ಜೆ (93) ನಗರದ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.

ಖ್ಯಾತ ಜೆಸ್ಯೂಟ್ ಪಾದ್ರಿ, ವಿಜ್ಞಾನಿಯಾಗಿದ್ದ ಫಾ.ಲಿಯೋ ಡಿಸೋಜ ಸಸ್ಯಶಾಸ್ತ್ರ ಸಂಶೋಧಕರಾಗಿ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದರು. ಪ್ರತಿಷ್ಠಿತ ಅಂತರ್‌ರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಅವರ ಹಲವಾರು ಸಂಶೋಧನಾ ಪ್ರಬಂಧಗಳು ಪ್ರಕಟವಾಗಿತ್ತು.

ಮಂಗಳೂರಿನಲ್ಲಿ ಜನಿಸಿದ ಅವರು ಸಂತ ಅಲೋಶಿಯಸ್ ಕಾಲೇಜು ಸಂಸ್ಥೆಗಳಲ್ಲಿ ತಮ್ಮ ಆರಂಭಿಕ ಶಿಕ್ಷಣವನ್ನು ಪಡೆದು, ಅದೇ ಸಂಸ್ಥೆಯೊಂದಿಗೆ ಅವರು ತಮ್ಮ ಜೀವನದುದ್ದಕ್ಕೂ ನಿಕಟ ಸಂಬಂಧ ಹೊಂದಿದ್ದರು. ಸಂತ ಅಲೋಶಿಯಸ್ ಕಾಲೇಜಿನ ಪ್ರಾಂಶುಪಾಲರಾಗಿ ಬಳಿಕ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜು ಸಂಸ್ಥೆಗಳ ರೆಕ್ಟರ್ ಆಗಿ ಸೇವೆ ಸಲ್ಲಿಸಿದ್ದರು.

ಜರ್ಮನಿಯ ವಿಶ್ವಪ್ರಸಿದ್ಧ ಮ್ಯಾಕ್ಸ್ ಪ್ಲಾಂಕ್ ಸಂಸ್ಥೆಯಲ್ಲಿ ಪಿಎಚ್‌ಡಿ ಅಧ್ಯಯನ ನಡೆಸಿದ್ದರು. ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನಲ್ಲಿ (ಸ್ವಾಯತ್ತ) ಅನ್ವಯಿಕ ಜೀವಶಾಸ್ತ್ರದ ಪ್ರಯೋಗಾಲಯವನ್ನು ಸ್ಥಾಪಿಸಿದ್ದರು.

ಉನ್ನತ ಶಿಕ್ಷಣ ಮತ್ತು ಆಧ್ಯಾತ್ಮಿಕ ನಾಯಕತ್ವಕ್ಕೆ ಅವರ ಅತ್ಯುತ್ತಮ ಕೊಡುಗೆಗಳನ್ನು ಗುರುತಿಸಿ, ಕಳೆದ ವರ್ಷದ ಜುಲೈನಲ್ಲಿ ಕೊಲಂಬಿಯಾದ ಬೊಗೋಟಾದಲ್ಲಿ ನಡೆದ ಅಂತರ್‌ರಾಷ್ಟ್ರೀಯ ಜೆಸ್ಯೂಟ್ ವಿಶ್ವವಿದ್ಯಾಲಯಗಳ ಸಂಘ (ಐಎಜೆಯು)ದ ಸಮ್ಮೇಳನದಲ್ಲಿ ಫಾದರ್ ಲಿಯೋ ಡಿ ಸೋಜ ಅವರಿಗೆ ಪ್ರತಿಷ್ಠಿತ ಕ್ಯಾನಿಸಿಯಸ್ ಪದಕ ನೀಡಿ ಗೌರವಿಸಲಾಗಿತ್ತು.

ಫಾ.ಲಿಯೋ ಡಿಸೋಜ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ಗುರುವಾರ ಅಪರಾಹ್ನ 3 ಗಂಟೆಗೆ ಮಂಗಳೂರಿನ ಫಾತಿಮಾ ರಿಟ್ರೀಟ್ ಹೌಸ್‌ನಲ್ಲಿರುವ ಡಿವೈನ್ ಮರ್ಸಿ ಚರ್ಚ್‌ನಲ್ಲಿ ನೆರವೇರಲಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

Vijayakarnataka 22-01-2026

# ರೆ.ಫಾ.ಲಿಯೋ ಡಿಸೋಜ



**ಮಂಗಳೂರು:** ನಗರದ ಸಂತ ಅಲೋಶಿಯಸ್ ಕಾಲೇಜಿನ ಮಾಜಿ ರೆಕ್ಟರ್ ಹಾಗೂ ಪ್ರಿನ್ಸಿಪಾಲ್ ಅಪ್ಲೈಡ್ ಬಯಾಲಜಿ ಪ್ರಯೋಗಾಲಯದ ನಿರ್ದೇಶಕರಾಗಿದ್ದ ಫಾ. ಲಿಯೋ ಡಿಸೋಜ ಎಸ್‌ಜೆ (93) ಅವರು ನಿಧನರಾದರು. ಶಿಕ್ಷಣ ಕ್ಷೇತ್ರದಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದ ಫಾ.ಲಿಯೋ ಡಿಸೋಜ ಅವರು ಸಂತ ಅಲೋಶಿಯಸ್ ಕಾಲೇಜಿನ ಶೈಕ್ಷಣಿಕ ಮತ್ತು ಸಂಶೋಧನಾ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದರು. ಶಿಸ್ತಿನ ಆಡಳಿತಗಾರರಾಗಿಯೂ, ವಿದ್ಯಾರ್ಥಿ ಸ್ನೇಹಿ ಗುರುವಾಗಿಯೂ ಅವರು ಎಲ್ಲರ ಮೆಚ್ಚುಗೆ ಪಡೆದಿದ್ದರು.

*Deccan Herald*
*21-01-2026*



Fr Leo D'Souza

**OBITUARY**

## Fr Leo D'Souza

▸ MANGALURU, DHNS: Widely popular Jesuit priest, acclaimed botanist, former rector and principal of St Aloysius College Fr Leo D'Souza passed away at the Fr Muller's Hospital on Tuesday.

He was 93. Born in Mangaluru, Fr Leo D'Souza had his early education at St Aloysius College institutions, with which he remained closely associated throughout his life.

He served as the principal of the St Aloysius College and later as the rector of St Aloysius College institutions in Mangaluru, playing a pivotal role in shaping generations of students and strengthening the institution's academic and spiritual foundations.

Fr Leo D'Souza was internationally recognised for his contributions to botanical research. He pursued his PhD studies at the world-famous Max Planck Institute in Germany and went on to establish the Laboratory of Applied Biology at St Aloysius College (Autonomous). As a scientist, he published numerous research papers in reputable international journals, earning respect in academic circles across the globe.

In recognition of his outstanding contributions to higher education and spiritual leadership, Fr Leo D'Souza was awarded the prestigious Canisius Medal at the International Association of Jesuit Universities (IAJU) Assembly held in Bogota, Colombia, in July 2025. He had recently celebrated 60 years of Jesuit priesthood. Many former students recollected being awestruck with Fr Leo's simplicity.

"Father Leo was a profoundly humble and gentle soul. To both young and the old, he stood as a living example of discipline, integrity, and dedication to the greater good of South Canara. His passing is a tremendous loss," a relative of Fr Leo said.

"He inspired generations to think critically, live ethically and serve selflessly. His life of learning, and service will continue to guide all who were privileged to learn under him. Fr Leo's legacy will guide us always," an alumnus said.

### Funeral mass

The funeral Mass will be held at the Divine Mercy Church, Fatima Retreat House, on Thursday at 3 pm, followed by the burial at the Jesuit Cemetery.

Udayavani 22-01-2026

# ಮಿಲಾಗ್ರಿಸ್ ಕಾಲೇಜು: ಅಧ್ಯಾಪಕರ ಅಭಿವೃದ್ಧಿ ಕಾರ್ಯಾಗಾರ
## ಕೃತಕ ಬುದ್ಧಿಮತ್ತೆಯ ಪರಿಣಾಮಕಾರಿ ಬಳಕೆ ಅಗತ್ಯ

**ಹಂಪನಕಟ್ಟೆ ಜ. 21:** ಇಲ್ಲಿನ ಮಿಲಾಗ್ರಿಸ್ ಕಾಲೇಜು ಇದರ ಆಂತರಿಕ ಗುಣಮಟ್ಟ ಭರವಸೆ ಕೋಶ (ಐಕ್ಯುಎಸಿ) ಮತ್ತು ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ಇದರ ಸಹಯೋಗದೊಂದಿಗೆ, 'ಬೋಧನೆ ಮತ್ತು ಮಾಧ್ಯಮ ತಂತ್ರಜ್ಞಾನದ ಅಳವಡಿಕೆ ಎಐ ಪರಿಕರಗಳೊಂದಿಗೆ ಶಿಕ್ಷಕರ ಸಬಲೀಕರಣ' ಎಂಬ ವಿಷಯದ ಕುರಿತು ಅಧ್ಯಾಪಕರ ಅಭಿವೃದ್ಧಿ ಕಾರ್ಯಾಗಾರ ಮಂಗಳವಾರ ಕಾಲೇಜಿನಲ್ಲಿ ನಡೆಯಿತು.



ಮೊದಲ ಗೋಷ್ಠಿಯಲ್ಲಿ ಮಂಗಳೂರಿನ ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ಮಾಧ್ಯಮ ಅಧ್ಯಯನ ವಿಭಾಗದ ಪ್ರಾಧ್ಯಾಪಕರು, ಲೀಫ್ ಅಕಾಡೆಮಿಯ ಸ್ಥಾಪಕ ಯೂಸಫುಲ್ ಅರ್ಷದ್ ಮಾತನಾಡಿ, ಬೋಧನ-ಕಲಿಕಾ ಪ್ರಕ್ರಿಯೆ ಮತ್ತು ದಿನನಿತ್ಯದ ಶೈಕ್ಷಣಿಕ ಬದುಕಿನಲ್ಲಿ ಕೃತಕ ಬುದ್ಧಿಮತ್ತೆ ಪರಿಕರಗಳ ಪರಿಣಾಮಕಾರಿ ಬಳಕೆಯನ್ನು ಪರಿಚಯಿಸಿದರು. ಅಧ್ಯಾಪಕರಿಗೆ ಕಲಿಕಾ ಕಾರ್ಯಾಗಾರ ನಡೆಸಲಾಯಿತು. ಸೈಂಟ್ ಅಲೋಶಿಯಸ್ ಮಾಧ್ಯಮ ಅಧ್ಯಯನ ವಿಭಾಗದ ಪ್ರಾಧ್ಯಾಪಕ ವಿಲ್ಸನ್ ಪಿರೇರಾ ಮಾತನಾಡಿ, ಕೃತಕ ಬುದ್ಧಿಮತ್ತೆಯ ಸಾಧಕ ಬಾಧಕಗಳ ಬಗ್ಗೆ ಹೇಳಿದರು.

ಪ್ರಾಧ್ಯಾಪಕ ವಿಶಾಲ್ ನಾಯಕ್ ಮಾತನಾಡಿ, ಕಾಲೇಜುಗಳ ಮಾಧ್ಯಮ ಶಿಕ್ಷಣದಲ್ಲಿ ಎಐ ಪರಿಕರಗಳನ್ನು ಸಂಯೋಜಿಸುವ ಬಗ್ಗೆ ಪ್ರಾಯೋಗಿಕ ತರಬೇತಿಯನ್ನು ನೀಡಿದರು.

ಮಿಲಾಗ್ರಿಸ್ ಕಾಲೇಜಿನ ಪ್ರಾಂಶುಪಾಲರು, ಕ್ಯಾಂಪಸ್ ನಿರ್ದೇಶಕ ವಂ। ಡಾ। ಆಲ್ವಿನ್ ಸೆರಾವೊ ಸ್ವಾಗತಿಸಿ, ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಕೃತಕ ಬುದ್ಧಿಮತ್ತೆಯ ಪ್ರಸ್ತುತತೆಯನ್ನು ತಿಳಿಸಿದರು. ಶಿಕ್ಷಕರು ತಮ್ಮ ಬೋಧನ ಪದ್ಧತಿಯಲ್ಲಿ ನೂತನ ಡಿಜಿಟಲ್ ಪರಿಕರಗಳನ್ನು ಅಳವಡಿಸಿಕೊಳ್ಳುವಂತೆ ಉತ್ತೇಜಿಸಿದರು. ಕಾರ್ಯಕ್ರಮ ಸಂಯೋಜಕ ಅಂಜು ಎಲ್ಲಾ ಥಾಮಸ್, ಉಪಪ್ರಾಂಶು ಗ್ಲಾನ್ಸಿಯಾ ಫೆರ್ನಾಂಡಿಸ್ ಸಂಪನ್ಮೂಲ ವ್ಯಕ್ತಿಗಳು, ಅಧ್ಯಾಪಕರು ಉಪಸ್ಥಿತರಿದ್ದರು. ಪ್ರತಿಭಾ ನಿರೂಪಿಸಿ, ಐಕ್ಯೂಎಸಿ ಸಂಯೋಜಕಿ ಚೇತನ ವಂದಿಸಿದರು.

Prajavani 22-01-2026

# ಮಿಲಾಗ್ರಿಸ್ ಕಾಲೇಜಿನಲ್ಲಿ 'ಎಐ' ವಿಚಾರ ಸಂಕಿರಣ

ಮಂಗಳೂರು: ನಗರದ ಮಿಲಾಗ್ರಿಸ್ ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶ ಮತ್ತು ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಸಹಯೋಗ ದಲ್ಲಿ, 'ಬೋಧನೆ ಮತ್ತು ಮಾಧ್ಯಮ ತಂತ್ರಜ್ಞಾನ ಅಳವಡಿಕೆ: ಎಐ ಪರಿಕರಗಳೊಂದಿಗೆ ಶಿಕ್ಷಕರ ಸಬಲೀಕರಣ' ವಿಷಯದ ಕುರಿತು ಒಂದು ದಿನದ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮಂಗಳೂರಿನ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಯೂಸಫುಲ್ ಅರ್ಷದ್, ವಿಲ್ಸನ್ ಪಿರೇರಾ, ವಿಶಾಲ್ ನಾಯಕ್ ಮಾತನಾಡಿದರು.

ಮಿಲಾಗ್ರಿಸ್ ಕಾಲೇಜಿನ ಪ್ರಾಂಶುಪಾಲರು ಮತ್ತು ಕ್ಯಾಂಪಸ್ ನಿರ್ದೇಶಕ ಫಾ. ಅಲ್ವಿನ್ ಸೆರಾವೊ, ಶಿಕ್ಷಕರು ತಮ್ಮ ಬೋಧನಾ ಪದ್ಧತಿಯಲ್ಲಿ ನವೀನ ಡಿಜಿಟಲ್ ಪರಿಕರಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಸಂಯೋಜಕಿ ಅಂಜು ಎಲ್ಲಾ ಥಾಮಸ್, ಉಪಪ್ರಾಂಶುಪಾಲೆ ಗ್ಲಾನ್ಸಿಯಾ ಫರ್ನಾಂಡಿಸ್, ಸಂಪನ್ಮೂಲ ವ್ಯಕ್ತಿಗಳು, ಅಧ್ಯಾಪಕರು ಉಪಸ್ಥಿತರಿದ್ದರು. ಪ್ರತಿಭಾ ಕಾರ್ಯಕ್ರಮ ನಿರೂಪಿಸಿದರು. ಐಕ್ಯುಎಸಿ ಸಂಯೋಜಕಿ ಚೇತನಾ ವಂದಿಸಿದರು.

Vijayavani 22-01-2026



## ಬೀಚ್ ಸ್ವಚ್ಛತೆ

ರಾಮಕೃಷ್ಣ ಮಿಷನ್ ಸ್ವಚ್ಛ ಮಂಗಳೂರು ಅಭಿಯಾನದಡಿ ಸೋಮೇಶ್ವರ ಬೀಚ್‌ನಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ಫಾ. ಅವಿನಾಶ್ ಡಿಸೋಜ ಮತ್ತು ಅನಿರುದ್ಧ ನಾಯಕ್ ಸ್ವಚ್ಛ ಸಾಗರ ಶ್ರಮದಾನಕ್ಕೆ ಚಾಲನೆ ನೀಡಿದರು. ಸೇಂಟ್ ಅಲೋಶಿಯಸ್ ಪಿಜಿ ಸೆಂಟರ್‌ನ ಪ್ರಾಧ್ಯಾಪಕರಾದ ಗೌತಮಿ, ರಚನಾ, ಮಹಾಲಕ್ಷ್ಮೀ ಮತ್ತು ಶ್ರೀಶಾ ನೇತೃತ್ವದಲ್ಲಿ ವಿದ್ಯಾರ್ಥಿ ಸ್ವಯಂಸೇವಕರು ಸ್ವಚ್ಛತಾ ಅಭಿಯಾನ ನಡೆಸಿದರು. ಹಿರಿಯ ಸ್ವಯಂಸೇವಕರಾದ ಉದಯ ಕೆ.ಪಿ., ತಾರಾನಾಥ್ ಆಳ್ವ, ಶ್ರೀಧರ್, ರಾಜೀವಿ ಚಂದ್ರಶೇಖರ್, ಪ್ರಕಾಶ್, ಬಬಿತಾ, ಸಚಿನ್ ಶೆಟ್ಟಿ, ನವನೀತ್, ವರುಣ್, ರಾಘವೇಂದ್ರ, ಹರ್ಷ, ಬಂಟ್ವಾಳ ಸಮಗ್ರ ಘನತ್ಯಾಜ್ಯ ನಿರ್ವಹಣಾ ಘಟಕ ಸಿಬ್ಬಂದಿ ಭಾಗವಹಿಸಿದ್ದರು.

*Varthabharathi 24-01-2026*

# ರಂಗಭೂಮಿ ಜನಸಾಮಾನ್ಯರ ಮಾಧ್ಯಮ: ನಾಗರಾಜ ಮೂರ್ತಿ




> ರಂಗಭೂಮಿಯಲ್ಲಿ ರಾಜಕೀಯವನ್ನು ಬೆರೆಸುವ ಕೆಲಸ ಇತ್ತೀಚೆಗೆ ಅತಿಯಾಗಿ ನಡೆಯುತ್ತಿದ್ದು, ಅದನ್ನು ಸಮರ್ಥವಾಗಿ ಎದುರಿಸದಿದ್ದಲ್ಲಿ ಮುಂದಿನ ದಿನಗಳು ರಂಗಭೂಮಿಯ ಪಾಲಿಗೆ ಕರಾಳವಾಗಲಿದೆ.
>
> । ಡಾ.ಕೆ.ವಿ.ನಾಗರಾಜ ಮೂರ್ತಿ, ಕರ್ನಾಟಕ ನಾಟಕ ಅಕಾಡಮಿ ಅಧ್ಯಕ್ಷ

ಮಂಗಳೂರು, ಜ.23: ರಂಗಭೂಮಿ ಜನರನ್ನು ಸಮ ಸಮಾಜ ನಿರ್ಮಾಣದತ್ತ ಹೆಜ್ಜೆ ಹಾಕಿಸುವ ಮಾಧ್ಯಮವಾಗಿದೆ. ಆದರೆ ಇಂದು ದೇಶಾದ್ಯಂತ ರಂಗಭೂಮಿ ಹಿನ್ನಡೆ ಅನುಭವಿಸುತ್ತಿದೆ ಎಂದು ಕರ್ನಾಟಕ ನಾಟಕ ಅಕಾಡಮಿ ಅಧ್ಯಕ್ಷ ಡಾ.ಕೆ.ವಿ. ನಾಗರಾಜ ಮೂರ್ತಿ ಹೇಳಿದ್ದಾರೆ.

ಮಂಗಳೂರಿನ ಸಂತ ಅಲೋಶಿಯಸ್ ವಿವಿಯಲ್ಲಿ ನಗರದ ರಂಗ ತಂಡಗಳು, ಅಲೋಶಿಯಸ್ ವಿವಿ ಹಾಗೂ ಬೆಂಗಳೂರಿನ ಬಹುರೂಪಿ ಪ್ರಕಾಶನ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಂಗ ಸಂವಾದದಲ್ಲಿ ಅವರು ಮಾತನಾಡುತ್ತಿದ್ದರು.

ಶಾಲೆ ಕಾಲೇಜುಗಳಲ್ಲಿ ರಂಗ ಶಿಕ್ಷಕರನ್ನು ನೇಮಿಸಿಕೊಳ್ಳುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕರ್ನಾಟಕ ನಾಟಕ ಅಕಾಡಮಿಯು ಈ ಬಗ್ಗೆ ಸಚಿವ ಮಧು ಬಂಗಾರಪ್ಪ ಜೊತೆ ಈಗಾಗಲೇ ಚರ್ಚಿಸಿದೆ. ರಂಗ ಶಿಕ್ಷಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಿಸಿಕೊಳ್ಳುವ ಪ್ರಕ್ರಿಯೆ ಸದ್ಯದಲ್ಲೇ ಆರಂಭವಾಗಲಿದೆ ಎಂದರು.

ಇಂದಿನ ಯುವ ಜನಾಂಗ ಓದು ಹಾಗೂ ರಂಗಭೂಮಿಯಿಂದ ವಿಮುಖರಾಗುತ್ತಿರುವ ಬಗ್ಗೆ ಸಭಿಕರು ವ್ಯಕ್ತಪಡಿಸಿದ ಆತಂಕಕ್ಕೆ ಉತ್ತರಿಸಿದ ಅವರು, ನಾಟಕ ಅಕಾಡಮಿ ಯುವಕರಿಗಾಗಿ ರಂಗ ಕಾರ್ಯಾಗಾರಗಳನ್ನು ನಾಡಿನ ಹಲವು ಭಾಗಗಳಲ್ಲಿ ಹಮ್ಮಿಕೊಳ್ಳುತ್ತಿದೆ. ರಂಗಭೂಮಿಯನ್ನು ಜೀವಂತವಾಗಿ ಇರಿಸಲೆಂದೇ ಕಳೆದ ವರ್ಷದಿಂದ 'ರಂಗ ಪರಿಷೆ' ಎಂಬ ಮಹತ್ವಾಕಾಂಕ್ಷಿ ಹಬ್ಬವನ್ನು ನಡೆಸುತ್ತಾ ಬಂದಿದೆ. ಇದು ರಂಗಭೂಮಿ, ಸಾಹಿತ್ಯ ಹಾಗೂ ಇತರ ಎಲ್ಲಾ ಕಲೆಗಳ ಸಂಗಮ. ಫೆಬ್ರವರಿ ಮೊದಲ ವಾರವಿಡೀ ಈ ಪರಿಷೆ ಜರುಗಲಿದೆ ಎಂದರು.

ಪತ್ರಕರ್ತ, ಸಾಹಿತಿ ಜಿ.ಎನ್.ಮೋಹನ್ ಮಾತನಾಡಿ, ರಂಗಭೂಮಿಯನ್ನು ಕಾರ್ಪೊರೇಟ್ ಹಿಡಿತಕ್ಕೆ ತೆಗೆದುಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಇದು ಅಪಾಯಕಾರಿ ಬೆಳವಣಿಗೆ. ರಂಗಭೂಮಿ ಎಂದಿಗೂ ಜನಸಾಮಾನ್ಯರ ದನಿಯಾಗಿಯೇ ಉಳಿಯಬೇಕು ಎಂದು ಅಭಿಪ್ರಾಯಪಟ್ಟರು.

ಸಂವಾದದಲ್ಲಿ ಹಿರಿಯ ರಂಗಕರ್ಮಿಗಳಾದ ಆರ್. ನರಸಿಂಹಮೂರ್ತಿ, ಶ್ಯಾಮಸುಂದರ್, ಮಹೇಶ್ ನಾಯಕ್, ಸದಾಶಿವ ಮಾಸ್ತರ್, ರಾಮಾಂಜಿ ಭಾಗವಹಿಸಿದ್ದರು.

ಸಂತ ಅಲೋಶಿಯಸ್ ಕಾಲೇಜಿನ ಅಧ್ಯಾಪಕರಾದ ಡಾ.ದಿನೇಶ್ ನಾಯಕ್, ಕ್ರಿಸ್ಟೋಫರ್ ಡಿಸೋಜ ಮುಖ್ಯ ಅತಿಥಿಗಳಾಗಿದ್ದರು.

*Udayavani 24-01-2026*

## ನಾಟಕ ಅಕಾಡೆಮಿ ಅಧ್ಯಕ್ಷರೊಂದಿಗೆ ರಂಗತಂಡಗಳ ಸಂವಾದ

# ರಂಗಭೂಮಿ ಜನಸಾಮಾನ್ಯರ ಮಾಧ್ಯಮ




**ಬಾವುಟಗುಡ್ಡೆ, ಜ. 23:** ರಂಗಭೂಮಿ ಜನರನ್ನು ಚಿಂತನೆಗೆ ಹಚ್ಚಿ, ಸಮ ಸಮಾಜ ನಿರ್ಮಾಣದತ್ತ ಹೆಜ್ಜೆ ಹಾಕುವ ಮಾಧ್ಯಮ. ಆದರೆ ಇಂದು ದೇಶಾದ್ಯಂತ ರಂಗಭೂಮಿ ಹಿನ್ನಡೆಯನ್ನು ಅನುಭವಿಸುತ್ತಿದೆ ಎಂದು ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷ ಡಾ| ಕೆ.ವಿ. ನಾಗರಾಜ ಮೂರ್ತಿ ಅಭಿಪ್ರಾಯಪಟ್ಟರು.

ನಗರದ ರಂಗತಂಡಗಳು, ಅಲೋಶಿಯಸ್ ಕಾಲೇಜು, ಬೆಂಗಳೂರಿನ ಬಹುರೂಪಿ ಪ್ರಕಾಶನದ ಸಹಯೋಗದಲ್ಲಿ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ರಂಗ ಸಂವಾದದಲ್ಲಿ ಅವರು ಮಾತನಾಡಿದರು.

ರಂಗಭೂಮಿಯಲ್ಲಿ ರಾಜಕೀಯವನ್ನು ಬೆರೆಸುವ ಕೆಲಸ ಇತ್ತೀಚೆಗೆ ಅತಿಯಾಗಿದ್ದು ಅದನ್ನು ರಂಗಭೂಮಿ ಸಮರ್ಥವಾಗಿ ಎದುರಿಸದೇ ಹೋದಲ್ಲಿ ಮುಂದಿನ ದಿನಗಳು ರಂಗಭೂಮಿಯ ಮಟ್ಟಿಗೆ ಕರಾಳವಾಗಲಿದೆ ಎಂದರು.

ಇಂದಿನ ಯುವ ಜನಾಂಗ ಓದು, ರಂಗಭೂಮಿಯಿಂದ ವಿಮುಖರಾಗುತ್ತಿರುವ ಬಗ್ಗೆ ಸಭಿಕರು ವ್ಯಕ್ತಪಡಿಸಿದ ಆತಂಕಕ್ಕೆ ಉತ್ತರಿಸಿದ ಅವರು ನಾಟಕ ಅಕಾಡೆಮಿ ಯುವಕರಿಗಾಗಿ ರಂಗ ಕಾರ್ಯಾಗಾರಗಳನ್ನು ನಾಡಿನ ಹಲವು ಭಾಗಗಳಲ್ಲಿ ಹಮ್ಮಿಕೊಳ್ಳುತ್ತಿದೆ ಎಂದರು.

ಪತ್ರಕರ್ತ, ಸಾಹಿತಿ ಜಿ.ಎನ್. ಮೋಹನ್ ಮಾತನಾಡಿ, ರಂಗಭೂಮಿಯನ್ನು ಕಾರ್ಪೊರೇಟ್ ಹಿಡಿತಕ್ಕೆ ತೆಗೆದುಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಇದು ಅಪಾಯಕಾರಿ ಬೆಳವಣಿಗೆ. ರಂಗಭೂಮಿ ಎಂದಿಗೂ ಜನಸಾಮಾನ್ಯರ ದನಿಯಾಗಿಯೇ ಉಳಿಯಬೇಕು ಎಂದರು.

ಹಿರಿಯ ರಂಗ ಕರ್ಮಿಗಳಾದ ಆರ್. ನರಸಿಂಹಮೂರ್ತಿ, ಶ್ಯಾಮಸುಂದರ್, ಮಹೇಶ್ ನಾಯಕ್, ಸದಾಶಿವ ಮಾಸ್ತರ್, ರಾಮಾಂಜಿ ಭಾಗವಹಿಸಿದ್ದರು. ಸಂತ ಅಲೋಶಿಯಸ್ ಕಾಲೇಜಿನ ಅಧ್ಯಾಪಕರಾದ ದಿನೇಶ್ ನಾಯಕ್, ಕ್ರಿಸ್ಟೋಫರ್ ಅವರು ಮುಖ್ಯ ಅತಿಥಿಗಳಾಗಿದ್ದರು.

*Vijayavani 24-01-2026*

# 28ರಿಂದ ಅಲೋಶಿಯಸ್ ಅಂತಾರಾಷ್ಟ್ರೀಯ ಸಮ್ಮೇಳನ

**ಮಂಗಳೂರು:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಸ್ಕೂಲ್ ಆಫ್ ಆರ್ಟ್ಸ್ ಆ್ಯಂಡ್ ಹ್ಯೂಮಾನಿಟಿಸ್ ವತಿಯಿಂದ ಸುಸ್ಥಿರ ಅಭಿವೃದ್ಧಿಗಾಗಿ ಶಾಂತಿ ಮತ್ತು ಸಮಾವೇಶಿತ ಸಮಾಜಗಳ ಉತ್ತೇಜನ ಎಂಬ ವಿಷಯದ ಮೇಲೆ ಜ.28 ಮತ್ತು 29ರಂದು ವಿಶ್ವವಿದ್ಯಾಲಯದಲ್ಲಿ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ.

ನಗರದ ಪತ್ರಿಕಾಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಸಮ್ಮೇಳನ ಅಧ್ಯಕ್ಷೆ ಡಾ.ರೋಸ್ ಮೀರ ಡಿಸೋಜ ಮಾತನಾಡಿ, 28ರಂದು ಬೆಳಗ್ಗೆ 10ಕ್ಕೆ ಎಲ್.ಎಫ್.ರಸ್ಕಿನ್ಹಾ ಸಭಾಂಗಣದಲ್ಲಿ ಉದ್ಘಾಟನೆ ನಡೆಯಲಿದೆ. ಡಿಸಿ ಎಚ್.ವಿ.ದರ್ಶನ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಂತ ಅಲೋಶಿಯಸ್ ವಿ.ವಿ. ಕುಲಾಧಿಪತಿ ರೆ.ಫಾ.ಡಯನೀಶಿಯಸ್ ವಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಂತ್ರಯಾ ಇನ್‌ಸ್ಟಿಟ್ಯೂಟ್ ಆಫ್ ಸ್ಟ್ರಾಟೆಜಿಕ್ ಸ್ಟಡೀಸ್ ಸಂಸ್ಥೆ ಸ್ಥಾಪಕಿ ಹಾಗೂ ಅಧ್ಯಕ್ಷೆ, ಅಮೆರಿಕದ ಯೂನಿವರ್ಸಿಟಿ ಆಫ್ ಮ್ಯಾಸಚೂಸೆಟ್ಸ್ ಆಮ್ಹೆರ್ಸ್ಟ್ ಹಿರಿಯ ಸಂಶೋಧಕಿ ಡಾ.ಶಾಂತಿ ಎಂ.ಡಿಸೋಜ ದಿಕ್ಸೂಚಿ ಭಾಷಣ ನೀಡಲಿದ್ದಾರೆ ಎಂದರು.

ರಾಷ್ಟ್ರ ಮತ್ತು ಅಂತಾರಾಷ್ಟ್ರೀಯಮಟ್ಟದ ವಿದ್ವಾಂಸರು ವಿವಿಧ ವಿಷಯದ ಮೇಲೆ ಮಾತನಾಡಲಿದ್ದಾರೆ. 29ರಂದು ಮಧ್ಯಾಹ್ನ 3 ಗಂಟೆಗೆ ಸಮಾರೋಪ ಸಮಾರಂಭದಲ್ಲಿ ಎಸಿಪಿ ಗೀತಾ ಡಿ.ಕುಲಕರ್ಣಿ ಮುಖ್ಯ ಅತಿಥಿಯಾಗಿರುವರು. ಸಂತ ಅಲೋಶಿಯಸ್ ವಿವಿ ಕುಲಪತಿ ರೆ.ಡಾ.ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ವಿವಿ ಸಹಕುಲಪತಿ ರೆ.ಡಾ.ಮೆಲ್ವಿನ್ ಡಿಕುನ್ಹಾ, ಸಂಚಾಲಕ ಆಲ್ವಿನ್ ಡಿಸೋಜ, ಸಂಘಟನಾ ಕಾರ್ಯದರ್ಶಿ ರೋಶನ್ ಮೊಂತೇರೊ, ಪಿಆರ್‌ಒ ಚಂದ್ರಕಲಾ, ಸಮ್ಮೇಳನದ ಸಂಯೋಜಕ ದೇವಿಶ್ರೀ ಶೆಟ್ಟಿ ಭಾಗವಹಿಸಲಿದ್ದಾರೆ.

*Varthabharathi 24-01-2026*

# ಜ.28, 29: ಸಂತ ಅಲೋಶಿಯಸ್ ವಿವಿಯಲ್ಲಿ ಅಂ.ರಾಷ್ಟ್ರೀಯ ಸಮ್ಮೇಳನ

ಮಂಗಳೂರು, ಜ.23: ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿಶ್ವ ವಿದ್ಯಾನಿಲಯದಲ್ಲಿ ಸ್ಕೂಲ್ ಆಫ್ ಆರ್ಟ್ಸ್ ಆಂಡ್ ಹ್ಯುಮಾನಿಟೀಸ್ ವತಿಯಿಂದ 'ಸುಸ್ಥಿರ ಅಭಿವೃದ್ಧಿಗಾಗಿ ಶಾಂತಿ ಮತ್ತು ಸಮಾವೇಶಿತ ಸಮಾಜಗಳ ಉತ್ತೇಜನ' ಎಂಬ ವಿಷಯದಲ್ಲಿ ಜ.28 ಮತ್ತು 29ರಂದು ಎರಡು ದಿನಗಳ ಅಂತರ್‌ರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮ್ಮೇಳನದ ಅಧ್ಯಕ್ಷೆ ಡಾ.ರೋಸ್‌ವೀರ ಡಿಸೋಜ, ಜ.28ರಂದು ಬೆಳಗ್ಗೆ 10ಕ್ಕೆ ಎಲ್.ಎಫ್.ರಸ್ಕಿನ್ಹಾ ಸಭಾಂಗಣದಲ್ಲಿ ಡಿಸಿ ಎಚ್.ವಿ. ದರ್ಶನ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಂತ ಅಲೋಶಿಯಸ್ ವಿವಿಯ ಕುಲಾಧಿಪತಿ ರೆ.ಫಾ.ಡಯನೀಶಿಯಸ್ ವಾಝ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಂತ್ರಯಾ ಇನ್‌ಸ್ಟಿಟ್ಯೂಟ್ ಆಫ್ ಸ್ಟ್ರಾಟೆಜಿಕ್ ಸ್ಟಡೀಸ್ ಸಂಸ್ಥೆಯ ಸ್ಥಾಪಕಿ ಹಾಗೂ ಅಧ್ಯಕ್ಷ, ಅಮೆರಿಕದ ಯೂನಿವರ್ಸಿಟಿ ಆಫ್ ಮ್ಯಾಸಚೂಸೆಟ್ಸ್ ಆಮ್ಹೆರ್ಸ್ಟ್‌ನ ಹಿರಿಯ ಸಂಶೋಧಕಿ ಡಾ.ಶಾಂತಿ ಎಂ. ಡಿಸೋಜ ಸಮ್ಮೇಳನದಲ್ಲಿ ದಿಕ್ಸೂಚಿ ಭಾಷಣ ಮಾಡುವರು ಎಂದರು.

ಸಮ್ಮೇಳನದಲ್ಲಿ ರಾಷ್ಟ್ರ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದ ವಿದ್ವಾಂಸರಾದ ಡಾ.ಕೃಷ್ಣರಾಜ್, ರೆ.ಡಾ. ಜೋಕಿಂ ಅಂದ್ರಾಡೆ, ಡಾ.ಯೂಟೆ ರಿಟ್ಸ್-ಡಾಯ್ಷ್, ಡಾ.ಅಲೆಕ್ಸಾಂಡ್ರು, ಬಾಲಾಸ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಜ.29ರಂದು ದ.ಕ. ಜಿಲ್ಲೆಯ ಅಪರ ಜಿಲ್ಲಾಧಿಕಾರಿ ರಾಜು ಕೆ. 'ಶಾಂತಿಪರ ಸಮಾಜಗಳ ಉತ್ತೇಜನಕ್ಕಾಗಿ ಸಂಸ್ಥೆಗಳ ಬಲವರ್ಧನೆ' ವಿಷಯದಲ್ಲಿ ಮಾತನಾಡಲಿದ್ದಾರೆ ಎಂದರು.

ಇತರ ಪ್ಯಾನಲ್ ಸದಸ್ಯರಾಗಿ ಲೆಪಿ, ಕೊಚ್ಚಿ ಸಂಸ್ಥೆಯ ಸಹ ನಿರ್ದೇಶಕ ರೆ.ಫಾ.ರೋಸನ್ ರಾಯ್, ಮಂಗಳೂರು ವಿವಿಯ ನಿವೃತ್ತ ರಾಜಶಾಸ್ತ್ರ ಪ್ರಾಧ್ಯಾಪಕ ಪ್ರೊ.ರಾಜರಾಮ್ ತೋಲ್ಪಾಡಿ ಹಾಗೂ ಮಕ್ಕಳ ಮನೋವೈದ್ಯೆ ಡಾ.ರುಕ್ಸಾನಾ ಹಸನ್ ವಿವಿಧ ವಿಚಾರಗಳ ಬಗ್ಗೆ ಮಾತನಾಡಲಿದ್ದಾರೆ. ವಿಚಾರ ಸಂಕಿರಣದಲ್ಲಿ ತಾಂತ್ರಿಕ ಅಧಿವೇಶನಗಳು ಮತ್ತು ಸಂಶೋಧನಾ ಪ್ರಬಂಧಗಳ ಪ್ರಸ್ತುತಿ ನಡೆಯಲಿದೆ ಎಂದರು.

ಅಪರಾಹ್ನ 3ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಎಸಿಪಿ ಗೀತಾ ಡಿ. ಕುಲಕರ್ಣಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದು, ಸಂತ ಅಲೋಶಿಯಸ್ ವಿವಿಯ ಕುಲ ಪತಿ ರೆ.ಡಾ. ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಮ್ಮೇಳನದಲ್ಲಿ ಪ್ರಸ್ತುತಪಡಿಸಲಾದ ಆಯ್ದ ಸಂಶೋಧನಾ ಪ್ರಬಂಧಗಳನ್ನು ಐಎಸ್‌ಬಿಎನ್/ ಐಎಸ್‌ಎಸ್‌ಎನ್ ಹೊಂದಿದ ಸಮ್ಮೇಳನ ಪ್ರಬಂಧ ಸಂಕಲನದಲ್ಲಿ ಪ್ರಕಟಿಸಲಾಗುತ್ತದೆ. ಕೆಲವು ಆಯ್ದ ಪ್ರಬಂಧಗಳನ್ನು ಡಿಒಐ ಹೊಂದಿದ ಪಿಯರ್ ರಿವ್ಯೂ ಜರ್ನಲ್‌ಗಳಲ್ಲಿ ಪ್ರಕಟಿಸುವ ಯೋಜನೆಯೂ ಇದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ವಿವಿಯ ಸಹಕುಲಪತಿ ರೆ.ಡಾ. ಮೆಲ್ವಿನ್ ಡಿಕುನ್ಹಾ, ಸಂಚಾಲಕ ಆಲ್ವಿನ್ ಡಿಸೋಜ, ಸಂಘಟನಾ ಕಾರ್ಯದರ್ಶಿ ರೋಶನ್ ಮೊಂತೇರೊ, ಪಿಆರ್‌ಒ ಚಂದ್ರ ಕಲಾ, ಸಮ್ಮೇಳನದ ಸಂಯೋಜಕಿ ದೇವಿಶ್ರೀ ಶೆಟ್ಟಿ ಉಪಸ್ಥಿತರಿದ್ದರು.

Udayavani 24-01-2026

# ಜ. 28, 29: ಸಂತ ಅಲೋಶಿಯಸ್ ವಿ.ವಿ.ಯಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ

**ಉರ್ವ, ಜ. 23:** ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದಲ್ಲಿ ಸ್ಕೂಲ್ ಆಫ್ ಆರ್ಟ್ಸ್ ಆಂಡ್ ಹ್ಯೂಮಾನಿಟಿಸ್ ವತಿಯಿಂದ 'ಸುಸ್ಥಿರ ಅಭಿವೃದ್ಧಿಗಾಗಿ ಶಾಂತಿ ಮತ್ತು ಸಮಾವೇಶಿತ ಸಮಾಜಗಳ ಉತ್ತೇಜನ' ಎಂಬ ವಿಷಯದ ಮೇಲೆ ಜ. 28, 29ರಂದು ವಿಶ್ವವಿದ್ಯಾಲಯದಲ್ಲಿ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ.

ನಗರದ ಪತ್ರಿಕಾಭವನದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಮ್ಮೇಳನದ ಅಧ್ಯಕ್ಷೆ ಡಾ| ರೋಸ್ ವೀರಾ ಡಿ'ಸೋಜಾ, ಜ. 28ರಂದು ಬೆಳಗ್ಗೆ 10 ಗಂಟೆಗೆ ಎಲ್.ಎಫ್. ರಸ್ಕಿನ್ಹಾ ಸಭಾಂಗಣದಲ್ಲಿ ಉದ್ಘಾಟನೆ ನಡೆಯಲಿದೆ. ಜಿಲ್ಲಾಧಿಕಾರಿ ಎಚ್.ವಿ. ದರ್ಶನ್ ಉದ್ಘಾಟಿಸಲಿದ್ದು, ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದ ಕುಲಾಧಿಪತಿ ವಂ| ಡಯನೀಶಿಯಸ್ ವಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಂತ್ರಯಾ ಇನ್ಸ್ಟಿಟ್ಯೂಟ್ ಆಫ್ ಸ್ಟ್ರಾಟೆಜಿಕ್ ಸ್ಟಡೀಸ್ ಸಂಸ್ಥೆಯ ಸ್ಥಾಪಕಿ ಹಾಗೂ ಅಧ್ಯಕ್ಷೆ ಅಮೆರಿಕದ ಯೂನಿವರ್ಸಿಟಿ ಆಫ್ ಮ್ಯಾಸಚೂಸೆಟ್ಸ್ ಆಮ್ಹೆರ್ಸ್ಟ್ ಇದರ ಹಿರಿಯ ಸಂಶೋಧಕಿ ಡಾ| ಶಾಂತಿ ಎಂ. ಡಿ'ಸೋಜಾ ಸಮ್ಮೇಳನದ ದಿಕ್ಸೂಚಿ ಭಾಷಣವನ್ನು ಮಾಡಲಿದ್ದಾರೆ ಎಂದರು.

ಜ. 29ರಂದು ಅಪರಾಹ್ನ 3 ಗಂಟೆಗೆ ನಡೆಯುವ ಸಮಾರೋಪದಲ್ಲಿ ಎಸಿಪಿ ಗೀತಾ ಡಿ. ಕುಲಕರ್ಣಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದು, ಸಂತ ಅಲೋಶಿಯಸ್ ವಿ.ವಿ. ಕುಲಪತಿ ವಂ| ಡಾ| ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಸಮ್ಮೇಳನದಲ್ಲಿ ಪ್ರಸ್ತುತಪಡಿಸಲಾದ ಆಯ್ದ ಸಂಶೋಧನ ಪ್ರಬಂಧಗಳನ್ನು ಐ.ಎಸ್.ಬಿ.ಎನ್./ ಐಎಸ್ಎಸ್ಎನ್ ಹೊಂದಿದ ಸಮ್ಮೇಳನ ಪ್ರಬಂಧ ಸಂಕಲನದಲ್ಲಿ ಪ್ರಕಟಿಸಲಾಗುತ್ತದೆ. ಕೆಲವು ಆಯ್ದ ಪ್ರಬಂಧಗಳನ್ನು ಹಲವು ಜರ್ನಲ್‌ಗಳಲ್ಲಿ ಪ್ರಕಟಿಸುವ ಯೋಜನೆಯೂ ಇದೆ ಎಂದರು.

ವಿ.ವಿ. ಸಹಕುಲಪತಿ ವಂ| ಡಾ| ಮೆಲ್ವಿನ್ ಡಿ.ಕುನ್ಹಾ, ಸಂಚಾಲಕ ಆಲ್ವಿನ್ ಡಿ'ಸೋಜಾ, ಸಂಘಟನ ಕಾರ್ಯದರ್ಶಿ ರೋಶನ್ ಮೊಂತೇರೊ, ಪಿಆರ್‌ಒ ಚಂದ್ರಕಲಾ, ಸಮ್ಮೇಳನದ ಸಂಯೋಜಕ ದೇವಿಶ್ರೀ ಶೆಟ್ಟಿ ಭಾಗವಹಿಸಲಿದ್ದಾರೆ.

*Times of India*
*24-01-2026*

# St Aloysius will host conference

TIMES NEWS NETWORK

**Mangaluru:** St Aloysius (Deemed to be University) will host a two-day international conference titled 'Promoting Peaceful and Inclusive Societies for Sustainable Development' from Jan 28, said Rev Fr Melwyn D'Cunha, pro vice-chancellor, while addressing reporters on Friday.

